# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಮೇ 29, 2021

ಸಂಪುಟ : 48 ಸಂಚಿಕೆ : 15 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




**ಬಿಡೆನೆಂದರೂ ಬಿಡದ ಭಕ್ತಿ...** ಕೊರೊನಾ ಹಿನ್ನೆಲೆಯಲ್ಲಿ ದೇವಸ್ಥಾನಗಳಿಗೆ ಭಕ್ತರ ಪ್ರವೇಶ ನಿಷೇಧಿಸಲಾಗಿದೆ. ಆದಾಗ್ಯೂ ನಿನ್ನೆ ಶುಕ್ರವಾರ ದಾವಣಗೆರೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದರ್ಶನವನ್ನು ಜನತೆ ಪಕ್ಕದ ಬಾಗಿಲಿನ ಬಳಿಯ ಕಿಂಡಿಯಿಂದಲೇ ಪಡೆದರು.

# ಬಂಗಾಳ : ರಾಜಕೀಯ ಚಂಡಮಾರುತ

## ✦ಪ್ರಧಾನಿ ಸಭೆಗೆ ಮಮತಾ ಗೈರು ✦ಮುಖ್ಯ ಕಾರ್ಯದರ್ಶಿ ವಾಪಸ್

ನವದೆಹಲಿ, ಮೇ 28 – ಚಂಡಮಾರುತ ಯಾಸ್ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಕರೆಯಲಾಗಿದ್ದ ಪರಿಶೀಲನಾ ಸಭೆಯಲ್ಲಿ ರಾಜಕೀಯ ಚಂಡಮಾರುತ ಉಂಟಾಗಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ರಾಜ್ಯದ ಉನ್ನತ ಅಧಿಕಾರಿಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರೆದಿದ್ದ ಸಭೆಗೆ 'ಗೈರಾಗಿದ್ದಾರೆ'. ಇದರ ಬೆನ್ನಲ್ಲೇ, ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಅಲಪನ್ ಬಂಡೋಪಾಧ್ಯಾಯ್ ಅವರನ್ನು ಕೇಂದ್ರ ಸರ್ಕಾರ ವಾಪಸ್ ಕರೆಸಿಕೊಂಡಿದೆ.

ಬಂಡೋಪಾಧ್ಯಾಯ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಬಿಡುಗಡೆ ಮಾಡಬೇಕು. ಅವರು ಮೇ 31ರಂದು ಬೆಳಿಗ್ಗೆ 10 ಗಂಟೆಗೆ ಕೇಂದ್ರ ಸಿಬ್ಬಂದಿ ಇಲಾಖೆಗೆ ವರದಿ ಮಾಡಿಕೊಳ್ಳಬೇಕು ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಆದೇಶ ಹೊರಡಿಸಿದೆ.

1987ರ ತಂಡದ ಐಎಎಸ್ ಅಧಿಕಾರಿಯಾಗಿರುವ ಬಂಡೋಪಾಧ್ಯಾಯ, ಮೇ 31ರಂದು ವಯೋ ನಿವೃತ್ತರಾಗಬೇಕಿತ್ತು. ಆದರೆ, ಅವರ ಅವಧಿಯನ್ನು ಮೂರು ತಿಂಗಳ ಕಾಲ ವಿಸ್ತರಿಸಲಾಗಿತ್ತು.

ಇದಕ್ಕೂ ಮುಂಚೆ ಪ್ರಧಾನ ಮಂತ್ರಿ ಕಲ್ಯೆಕುಂಡ ವೈಮಾನಿಕ ನೆಲೆಗೆ ಬಂದಿಳಿದಿದ್ದರು. ನಂತರ ಅವರು ಒಡಿಶಾ ಹಾಗೂ ಪಶ್ಚಿಮ ಬಂಗಾಳಗಳ ವೈಮಾನಿಕ ಸಮೀಕ್ಷೆ ನಡೆಸಿದ್ದರು. ಪರಿಶೀಲನಾ ಸಭೆಗೆ ಬಂದಾಗ ಪಶ್ಚಿಮ ಬಂಗಾಲ ಸರ್ಕಾರದ ಯಾರೊಬ್ಬರೂ ಇರಲಿಲ್ಲ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿಯವರಿಬ್ಬರೂ ಅದೇ ತಾಣದಲ್ಲಿದ್ದರೂ, ಪ್ರಧಾನಿ ಸ್ವಾಗತಿಸಲು ಬರಲಿಲ್ಲ ಎಂದು ಮೂಲಗಳು ಹೇಳಿವೆ.




ಪ್ರಧಾನ ಮಂತ್ರಿ, ರಾಜ್ಯಪಾಲ ಜಗದೀಪ್ ಧಂಕಡ್ ಹಾಗೂ ಕೇಂದ್ರ ಸಚಿವರು ಪಶ್ಚಿಮ ಬಂಗಾಳದ ಪ್ರತಿನಿಧಿಗಳಿಗಾಗಿ ತಾಳ್ಮೆಯಿಂದ ಅರ್ಧ ಗಂಟೆ ಕಾದರು. ಹಠಾತ್ತನೆ ಮಮತಾ ಬ್ಯಾನರ್ಜಿ ಅವರು ಧಾವಿಸಿ ಬಂದು, ಚಂಡಮಾರುತದ ಪರಿಣಾಮ ಕುರಿತು ಒಂದಿಷ್ಟು ಕಾಗದಗಳನ್ನು ಪ್ರಧಾನ ಮಂತ್ರಿಗೆ ಸಲ್ಲಿಸಿದರು. ಬೇರೆ ಭೇಟಿಗಳು ಇರುವ ಕಾರಣ ಹೊರಡುವುದಾಗಿ ಹೇಳಿ ಅಲ್ಲಿಂದ ಹೊರ ನಡೆದರು ಎಂದು ಮೂಲಗಳು ತಿಳಿಸಿವೆ.

ಸುಮಾರು ಹದಿನೈದು ನಿಮಿಷಗಳ ಕಾಲ ಪ್ರಧಾನಿ ಭೇಟಿ ಮಾಡಿದ ಮಮತಾ, ಚಂಡಮಾರುತದಿಂದ ರಾಜ್ಯಕ್ಕೆ ಹಾನಿಯಾಗಿದೆ, 20 ಸಾವಿರ ಕೋಟಿ ರೂ.ಗಳ ಪ್ಯಾಕೇಜ್ ನೀಡಬೇಕು ಎಂದು ಕೇಳಿ ಅಲ್ಲಿಂದ ಹೊರ ಹೋಗಿದ್ದಾರೆ.

ಅಷ್ಟೇ ಅಲ್ಲದೇ, ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಹಾಗೂ ಗೃಹ ಕಾರ್ಯದರ್ಶಿ ಚಂಡಮಾರುತದ ಕುರಿತು ವಿವರ ಸಲ್ಲಿಸಲೂ ಮಮತಾ ಅವಕಾಶ ಕೊಡಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮಮತಾ ಬ್ಯಾನರ್ಜಿ ಅವರ ವರ್ತನೆಯನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಖಂಡಿಸಿದ್ದಾರೆ.

ಪರಿಶೀಲನಾ ಸಭೆಯಲ್ಲಿ ಪ್ರತಿಪಕ್ಷದ ನಾಯಕ ಸುವೇಂದು ಅಧಿಕಾರಿ ಅವರಿದ್ದದ್ದು ಮಮತಾ ಅಸಮಧಾನಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಒಡಿಶಾ ಹಾಗೂ ಪಶ್ಚಿಮ ಬಂಗಾಳ ಎರಡರ (3ನೇ ಪುಟಕ್ಕೆ)

## ಬ್ಲಾಕ್ ಫಂಗಸ್ ಮಾತ್ರೆಗೆ ಜಿಎಸ್‌ಟಿ ವಿನಾಯಿತಿ

ನವದೆಹಲಿ, ಮೇ 28 – ಶುಕ್ರವಾರ ನಡೆದ ಜಿ.ಎಸ್.ಟಿ. ಮಂಡಳಿ ಸಭೆಯಲ್ಲಿ ಬ್ಲಾಕ್ ಫಂಗಸ್‌ಗೆ ಚಿಕಿತ್ಸೆ ನೀಡಲು ಬಳಸುವ ಆಂಫೋಟೆರಿಸಿನ್ ಬಿ ಮಾತ್ರೆಗೆ ತೆರಿಗೆ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ.

ವೈದ್ಯಕೀಯ ಆಕ್ಸಿಜನ್ ಹಾಗೂ ಲಸಿಕೆಗೆ ನೀಡಲಾಗಿರುವ ತೆರಿಗೆ ವಿನಾಯಿತಿಯನ್ನು ಆಗಸ್ಟ್ 31ರವರೆಗೆ ವಿಸ್ತರಿಸಲೂ ಸಹ ನಿರ್ಧರಿಸಲಾಗಿದೆ. ಈ ಸರಕುಗಳನ್ನು ಆಮದು ಮಾಡಿಕೊಂಡರೂ, ಉಚಿತವಾಗಿ ಹಂಚಿದರೂ ಇಲ್ಲವೇ ಸಂಸ್ಥೆಗಳಿಗೆ ದಾನ ಮಾಡಿದರೂ ವಿನಾಯಿತಿ ದೊರೆಯಲಿದೆ.

ಜಿ.ಎಸ್.ಟಿ. ಕೊರತೆಯಿಂದ ರಾಜ್ಯಗಳಿಗೆ ಆಗಿರುವ ನಷ್ಟವನ್ನು ಭರಿಸಲು ಕೇಂದ್ರ ಸರ್ಕಾರ 1.58 ಲಕ್ಷ ಕೋಟಿ ರೂ.ಗಳ (3ನೇ ಪುಟಕ್ಕೆ)

## ಮರಣೋತ್ತರ ಪರೀಕ್ಷೆ ತಪ್ಪಿಸಲು ನಕಲಿ ಕೋವಿಡ್ ವರದಿ

**ವರದಕ್ಷಿಣೆ ಪೀಡನೆಯಿಂದ ಆತ್ಮಹತ್ಯೆ ಪ್ರಕರಣ**

ಬೀಡ್, ಮೇ 28 - ಅತ್ತೆ-ಮಾವಂದಿರ ಪೀಡನೆಯಿಂದ ಆತ್ಮಹತ್ಯೆ ಮಾಡಿಕೊಂಡ 21 ವರ್ಷದ ಯುವತಿಯ ಮರಣೋತ್ತರ ಪರೀಕ್ಷೆ ತಪ್ಪಿಸಲು ನಕಲಿ ಕೋವಿಡ್ ಪಾಸಿಟಿವ್ ವರದಿ ಪಡೆದುಕೊಂಡ ಘಟನೆ ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಕುಟುಂಬದ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪತೋಡಾ ತೆಹಸಿಲ್‌ನ ಧಂಗರ್ ಜವಳ್ಕ ಹಳ್ಳಿಯ ನಿವಾಸಿ ಪೂಜಾ ಗಣೇಶ್ ರಾಯಕರ್ ಅವರು ಮೇ 19ರಂದು ಪತಿ ಹಾಗೂ ಕುಟುಂಬದವರ ವರದಕ್ಷಿಣೆ ಪೀಡನೆ ತಾಳಲಾಗದೇ ಸ್ಯಾನಿಟೈಸರ್ ಕುಡಿದು (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 522 ಪಾಸಿಟಿವ್, 2 ಸಾವು

ದಾವಣಗೆರೆ, ಮೇ 28- ಜಿಲ್ಲೆಯಲ್ಲಿ ಶುಕ್ರವಾರ 522 ಜನರಲ್ಲಿ ಕೊರೊನಾ ಸೋಂಕು ಕಾಣಿಸಿ ಕೊಂಡಿದ್ದು, 521 ಜನರು ಗುಣಮುಖರಾಗಿದ್ದಾರೆ. ಇಬ್ಬರು ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 154, ಹರಿಹರ 67, ಜಗಳೂರು 42, ಚನ್ನಗಿರಿ 123, ಹೊನ್ನಾಳಿ 129 ಹಾಗೂ ಹೊರ ಜಿಲ್ಲೆಯ 7 ಜನರಲ್ಲಿ ಸೋಂಕು ದೃಢಪಟ್ಟಿದೆ.

ಅಹ್ಮದ್ ನಗರದ 58 ವರ್ಷದ ಮಹಿಳೆ ಹಾಗೂ ನಿಟುವಳ್ಳಿಯ 74 ವರ್ಷದ ಮಹಿಳೆ ಸೋಂಕಿನಿಂದಾಗಿ ಸಾವನ್ನಪ್ಪಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 5337ಕ್ಕೆ ಏರಿಕೆಯಾಗಿದೆ.

## 12ನೇ ತರಗತಿ ಪರೀಕ್ಷೆ ರದ್ದತಿಗೆ ಮೇ 31ರಂದು ಸುಪ್ರೀಂ ವಿಚಾರಣೆ

ನವದೆಹಲಿ, ಮೇ 28 - ಸಿಬಿಎಸ್‌ಇ ಹಾಗೂ ಸಿಐಎಸ್‌ಸಿಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸುವ ಬಗ್ಗೆ ಸುಪ್ರೀಂ ಕೋರ್ಟ್ ಮೇ 31ರಂದು ವಿಚಾರಣೆ ನಡೆಸಲಿದೆ.

12ನೇ ತರಗತಿ ಫಲಿತಾಂಶವನ್ನು ಕಾಲಮಿತಿಯಲ್ಲಿ ಪ್ರಕಟಿಸಲು ನಿರ್ದೇಶನ ನೀಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಹಾಗೂ ದಿನೇಶ್ ಮಹೇಶ್ವರಿ ಅವರು ಅರ್ಜಿಯ ವಿಚಾರಣೆ ನಡೆಸುತ್ತಿದ್ದಾರೆ.

## ಕೊರೊನಾದಿಂದ ಅನಾಥರಾದ ಮಕ್ಕಳನ್ನು ಗುರುತಿಸಿ ನೆರವಾಗಿ

**ರಾಜ್ಯದ ಅಧಿಕಾರಿಗಳಿಗೆ ಸುಪ್ರೀಂ ಸೂಚನೆ**


ನವದೆಹಲಿ, ಮೇ 28 - ಈ ದೊಡ್ಡ ದೇಶದಲ್ಲಿ ಕೊರೊನಾದಿಂದ ಎಷ್ಟು ಮಕ್ಕಳು ಅನಾಥರಾಗಿದ್ದಾರೆ ಎಂಬುದನ್ನು ಊಹಿಸಲೂ ಬಯಸುವುದಿಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ತಕ್ಷಣವೇ ಅಂತಹ ಮಕ್ಕಳನ್ನು ಗುರುತಿಸಿ ಪರಿಹಾರ ನೀಡುವಂತೆ ರಾಜ್ಯದ ಅಧಿಕಾರಿಗಳಿಗೆ ತಿಳಿಸಿದೆ.

ರಾಜ್ಯ ಸರ್ಕಾರಗಳು ಬೀದಿಗಳಲ್ಲಿ ಹಸಿವಿನಿಂದ ಬಳಲುತ್ತಿರುವ ಮಕ್ಕಳ ನೋವು ಅರ್ಥ ಮಾಡಿಕೊಳ್ಳಬೇಕು. ಅವರಿಗೆ ತಕ್ಷಣವೇ ನೆರವು ನೀಡಲು ಜಿಲ್ಲಾ ಆಡಳಿತಗಳಿಗೆ ಸೂಚನೆ ನೀಡಬೇಕು ಎಂದು ನ್ಯಾಯಾಲಯ ಹೇಳಿದೆ.

ಜಿಲ್ಲಾ ಆಡಳಿತಗಳು ತಮ್ಮ ಪ್ರದೇಶಗಳಲ್ಲಿರುವ ಅನಾಥರನ್ನು ಗುರುತಿಸಿ ಅವರ ಮಾಹಿತಿಯನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವೆಬ್ ತಾಣಕ್ಕೆ ಶನಿವಾರದ ಒಳಗೆ (3ನೇ ಪುಟಕ್ಕೆ)

## ಬಾಪೂಜಿ ಆಸ್ಪತ್ರೆಯಿಂದ ಉಚಿತ ಲಸಿಕೆ

### ನಗರಕ್ಕೆ 2-3 ದಿನಗಳಲ್ಲಿ 10 ಸಾವಿರ ಡೋಸ್ ಲಸಿಕೆ : ಎಸ್ಸೆಸ್



ದಾವಣಗೆರೆ, ಮೇ 28- ತಮ್ಮ ಸ್ವಂತ ಖರ್ಚಿನಲ್ಲಿ ಜನರಿಗೆ ಲಸಿಕೆ ನೀಡಲು 40 ಸಾವಿರ ಡೋಸ್ ತರಿಸಲು ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮುಂದಾಗಿದ್ದಾರೆ.

ಇನ್ನೆರಡು ಮೂರು ದಿನಗಳಲ್ಲಿ 10 ಸಾವಿರ ಡೋಸ್ ವುಳ್ಳ 1 ಸಾವಿರ ಬಾಟಲ್‌ಗಳು ನಗರಕ್ಕೆ ಬರಲಿವೆ. ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಹಂತ - ಹಂತವಾಗಿ ಉಚಿತವಾಗಿ ಲಸಿಕೆ ನೀಡಲಾಗುವುದು ಎಂದು ಎಸ್ಸೆಸ್ ಅವರು ತಿಳಿಸಿದ್ದಾರೆ.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪಕ್ಕೆ ಕಾರ್ಯ ನಿಮಿತ್ತ ಇಂದು ಭೇಟಿ ನೀಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕೋವಿಡ್ ಲಸಿಕೆಯನ್ನು ನಾಗರಿಕರಿಗೆ ಉಚಿತವಾಗಿ ನೀಡುವ ಸದುದ್ದೇಶದಿಂದ ಬಾಪೂಜಿ ಆಸ್ಪತ್ರೆ ಮತ್ತು ಎಸ್.ಎಸ್. ಹೈಟೆಕ್ ಆಸ್ಪತ್ರೆಗಳಿಂದ ಲಸಿಕೆ ಖರೀದಿಸಲು ಕಂಪನಿಗಳೊಂದಿಗೆ ನಡೆಸಿದ ಸತತ ಚರ್ಚೆಯಿಂದಾಗಿ ಲಸಿಕೆ ಕಂಪನಿಗಳು ಒಪ್ಪಿಕೊಂಡಿದ್ದು, ಇದೀಗ ನಗರಕ್ಕೆ ಬರಲಿವೆ ಎಂದು ಅವರು ಹೇಳಿದರು.

ಲಸಿಕೆ ಹಾಕಿಸುವಲ್ಲಿ ರಾಜಕಾರಣ ಮಾಡುವುದು ಸಲ್ಲದು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಂಬ ತಾರತಮ್ಯ ಮಾಡದೇ ಎಲ್ಲರೂ ಒಗ್ಗೂಡಿ ಮಹಾಮಾರಿ ಕೊರೊನಾ ತೊಲಗಿಸಲು ಮುಂದಾಗಬೇಕು. ಜನ ಸಾಮಾನ್ಯರಿಗೆ ಸುಲಭವಾಗಿ ಲಸಿಕೆ ಹಾಕಿಸುವಲ್ಲಿ ಸರ್ವ ಪಕ್ಷಗಳ ಮುಖಂಡರು, ಕಾರ್ಯಕರ್ತರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಎಸ್ಸೆಸ್ ಹಿತನುಡಿದರು.

## ಸೋಂಕು ದೃಢಪಟ್ಟವರ ಮನೆ ಸೀಲ್ ಡೌನ್‌ಗೆ ಸಲಹೆ

ದಾವಣಗೆರೆ, ಮೇ 28- ಮುಂದಿನ ಎರಡು ವಾರಗಳ ಕಾಲ ಗಂಭೀರವಾಗಿ ಪರಿಶ್ರಮ ಪಟ್ಟು ಕೋವಿಡ್ ನಿಯಂತ್ರಿಸಲು ಯತ್ನಿಸಿದಲ್ಲಿ ಕೊರೊನಾ ನಿಯಂತ್ರಣಕ್ಕೆ ಬರಲಿದೆ. ಆದ ಕಾರಣ ಕೋವಿಡ್ ಪಾಸಿಟಿವ್ ಬಂದವರ ಮನೆಗಳನ್ನು ಸೀಲ್‌ಡೌನ್ ಮಾಡಬಹುದು ಅಥವಾ ದೊಡ್ಡದಾಗಿ ಪೋಸ್ಟರ್ ಅಂಟಿಸುವ ಕೆಲಸ ಆಗಬೇಕು. ಆಗ ಅವರಿಂದ ಇತರರಿಗೆ ಸೋಂಕು ಹರಡುವುದು ತಪ್ಪುತ್ತದೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಜಿಲ್ಲಾಡಳಿತಕ್ಕೆ ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತ ಕಚೇರಿಯಲ್ಲಿ ಇಂದು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಕೋವಿಡ್ (3ನೇ ಪುಟಕ್ಕೆ)

**ವಾರದಲ್ಲಿ 2 ರಿಂದ 3 ದಿನ ಬೆಳಿಗ್ಗೆ 6 ರಿಂದ 12 ಗಂಟೆವರೆಗೆ ದಿನಸಿ, ತರಕಾರಿ ಅಗತ್ಯ ವಸ್ತುಗಳ ಮಾರಾಟಕ್ಕೆ ಅವಕಾಶ ನೀಡಿ ಇನ್ನುಳಿದ ದಿನಗಳಂದು ಹಾಲು ಮಾರಾಟ ಹೊರತುಪಡಿಸಿ ಉಳಿದೆಲ್ಲವನ್ನೂ ಸಂಪೂರ್ಣ ಬಂದ್ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಚಿಂತನೆ ನಡೆಸುವಂತೆ ತಿಳಿಸಲಾಗಿದೆ ಎಂದು ಎಸ್.ಆರ್. ಉಮಾಶಂಕರ್ ಹೇಳಿದರು.**


**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217. ಪಿ.ಬಿ.ರಸ್ತೆ, ದಾವಣಗೆರೆ - 577002.

**ಬ್ಯಾಂಕಿನಿಂದ ಸಾಲ ಪಡೆದ ಸದಸ್ಯರ ಗಮನಕ್ಕೆ**

ಬ್ಯಾಂಕಿನ ಮಾನ್ಯ ಸದಸ್ಯರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೊರೊನಾ ವೈರಸ್‌ನಿಂದ ಗ್ರಾಹಕರ ವ್ಯವಹಾರದಲ್ಲಿ ತೊಂದರೆಯಾಗಿರುವುದಕ್ಕೆ ಬ್ಯಾಂಕಿನ ಕಾರ್ಯನಿರ್ವಾಹಕ ಮಂಡಲಿಯವರು ಸಾಲ ಪಡೆದ ಗ್ರಾಹಕರಿಗೆ ಸ್ಪಂದಿಸುವ ಉದ್ದೇಶದಿಂದ ಮೇ, ಜೂನ್ ಮತ್ತು ಜುಲೈ 2021ರ ತಿಂಗಳ ತನಕ ಅಸಲು ಮತ್ತು ಬಡ್ಡಿಯನ್ನು ನಂತರದ ತಿಂಗಳಿನ 10ನೇ ತಾರೀಖಿನೊಳಗೆ ಕಟ್ಟಿದವರಿಗೆ ಕೋವಿಡ್-19 ಎಂಬ ವಿವರಣೆಯೊಂದಿಗೆ 1% ಬಡ್ಡಿಯಲ್ಲಿ ರಿಯಾಯಿತಿಯನ್ನು ಬಡ್ಡಿ ಖಾತೆಗೆ ಜಮಾ ಮಾಡಲಾಗುವುದು. ಸಾಲ ಪಡೆದ ಮಾನ್ಯ ಗ್ರಾಹಕರು ಇದರ ಸದುಪಯೋಗವನ್ನು ಪಡೆಯಲು ಈ ಮೂಲಕ ಕೋರಿದೆ.

ವಿಶೇಷ ಸೂಚನೆ : ಈ ಸೌಲಭ್ಯವು ಮೂರು ತಿಂಗಳವರೆಗೆ ಮಾತ್ರ

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು — ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು — ಡಿ.ವಿ. ಆರಾಧ್ಯಮಠ, ಪ್ರಧಾನ ವ್ಯವಸ್ಥಾಪಕರು



**ಭಾವಪೂರ್ಣ ಶ್ರದ್ಧಾಂಜಲಿ**



ಆನಂದಪ್ಪ ಎಸ್.ಎಲ್.
ಇಂಜಿನಿಯರ್ ಇವರ ತಾಯಿಯವರಾದ
**ಶ್ರೀಮತಿ ದ್ಯಾಮಮ್ಮ**
ಇವರು, ದಿನಾಂಕ 22.05.2021ರಂದು ನಿಧರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ

○ ಎಂ.ಹೆಚ್. ಶರೀಫ್ ○ ರಜಿಯಾ ಶರೀಫ್
○ ರಮೇಶ್, ○ ಮುರಳಿ ○ ಇಕ್ಬಾಲ್ ಸಿಂಗ್
○ ನವೀನ್ ಕುಮಾರ್ ○ ಆಸಿಫ್
○ ಅಲ್ತಾಫ್ ○ ಸದಾನಂದ್
ಹಾಗೂ ಸಿಬ್ಬಂದಿ ವರ್ಗ
**ಕ್ರಿಯೇಟಿವ್ ಇಂಜಿನಿಯರ್ಸ್**



**ಕೆ. ರಮೇಶ್ ನಿಧನ**



ದಾವಣಗೆರೆಯ ಹೆಸರಾಂತ ನ್ಯೂ ಕೃಷ್ಣ ಬೇಕರಿಯ ಮಾಲೀಕರು
**ಕೆ. ರಮೇಶ್ (65) ಅವರು**
ದಿ. 27.05.2021ರ ಗುರುವಾರ ರಾತ್ರಿ 8 ಗಂಟೆಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಧರ್ಮಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿ. 28.05.2021ರ ಶುಕ್ರವಾರ ಬೆಳಿಗ್ಗೆ 10.20ಕ್ಕೆ ಬೆಂಗಳೂರಿನಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ,**
**ನ್ಯೂ ಕೃಷ್ಣ ಬೇಕರಿ, ಸಿಬ್ಬಂದಿ ವರ್ಗ**

## ಕ್ರೀಡಾ ವಿದ್ಯಾರ್ಥಿವೇತನಕ್ಕೆ ಅರ್ಜಿ

ದಾವಣಗೆರೆ, ಮೇ 28- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 6 ರಿಂದ 10ನೇ ತರಗತಿಯ ಪ್ರತಿಭಾವಂತ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಕ್ರೀಡಾ ವಿದ್ಯಾರ್ಥಿ ವೇತನ ಯೋಜನೆಯಡಿ ವಾರ್ಷಿಕ ರೂ. 10 ಸಾವಿರದಂತೆ ಕ್ರೀಡಾ ವಿದ್ಯಾರ್ಥಿ ವೇತನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಕ್ರೀಡಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ಕ್ರೀಡಾಪಟುಗಳು ಕಚೇರಿಯ ಅಧಿಕೃತ ಜಾಲತಾಣ http://serviceonline.gov.in/karnataka ಮೂಲಕ ಆನ್‌ಲೈನ್‌ನಲ್ಲಿ ಜೂನ್ 25 ರೊಳಗಾಗಿ ಅರ್ಜಿ ಸಲ್ಲಿಸಬಹುದು. ವಿವರಗಳಿಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಇವರನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಬಿ.ಶ್ರೀನಿವಾಸ ತಿಳಿಸಿದ್ದಾರೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಗಳು ಮಾರಾಟಕ್ಕಿವೆ**
ಆಂಜನೇಯ ಬಡಾವಣೆ ಉತ್ತರ 30x49 ಮನೆ ಮೇಲೆ ಹತ್ತು ರೂಂಗಳು (ಪಿ.ಜಿ. ನಡೆಸುವವರಿಗೆ ಒಳ್ಳೆಯ ಅವಕಾಶ) ವಿನಾಯಕ ಬಡಾವಣೆ (ವಿದ್ಯಾನಗರ) ಪೂರ್ವ 40x60 ಡುಪ್ಲೆಕ್ಸ್ ಮನೆ, 30x40 ಉತ್ತರ ಮೇಲೆ ಕೆಳಗೆ ಮನೆ. ಸಂಪರ್ಕಿಸಿ
ಐಗೂರು ವಿಜಯಕುಮಾರ್
99457 02495
ಸುರೇಶ್: 95911 60520

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ.ವಿ.ಕೆ. ವೆಂಕಟೇಶ್ ಇವರ ಜ್ಞಾಪಕಾರ್ಥವಾಗಿ ಶ್ರೀಮತಿ ನಳಿನಿ ಮತ್ತು ಕುಟುಂಬ ವರ್ಗದವರ ಸೇವಾರ್ಥ ಹದಡಿ ಕೃಷ್ಣಯ್ಯ ದಲಾಲಿ ಮಂಡಿ ಎಪಿಎಂಸಿ, ದಾವಣಗೆರೆ.
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಅನುಭವವುಳ್ಳ ಸ್ಟಾಫ್‌ನರ್ಸ್ ಬೇಕಾಗಿದ್ದಾರೆ**
ಮೊ: 99725 23910

**ಬೇಕಾಗಿದ್ದಾರೆ**
ಮನೆಗೆ ಬಂದು ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು ಕಲಿಸಲು ಬೇಕಾಗಿದ್ದಾರೆ. ಸಂಪರ್ಕಿಸಿ
ದಾವಣಗೆರೆ
89711 92936

**ಮನೆ ಬಾಡಿಗೆಗೆ ಇದೆ**
ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್, 3ನೇ ಮುಖ್ಯ ರಸ್ತೆಯಲ್ಲಿ ಪೂರ್ವದಿಕ್ಕಿನ 2ನೇ ಮಹಡಿಯಲ್ಲಿ (2nd Floor) ಒಂದು ಬೆಡ್‌ರೂಂನ ವಿಶಾಲವಾದ ಮನೆ ಬಾಡಿಗೆಗೆ ಇದೆ.
99161 25008
94807 78709

**ಭವಿಷ್ಯ Astrologer**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವ್ಯಾಪಾರದಲ್ಲಿ ಲಾಭ-ನಷ್ಟ,ಮಾಟ-ಮಂತ್ರ, ಆರೋಗ್ಯ , ಲೈಂಗಿಕ. ಸಮಸ್ಯೆ, ಸಾಲಬಾಧೆ, ಮನಃಪ್ರೇತಬಾಧೆ,ವಶೀಕರಣ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಇಂದೇ ಕರೆ ಮಾಡಿ
99807 70791

**ಅಕ್ವಾ ಶೈನ್**
ನಮ್ಮಲ್ಲಿ ಎಲ್ಲ ಕಂಪನಿಯ ವಾಟರ್ ಪ್ಯೂರಿಫೈಯರ್ ಸರ್ವೀಸ್ ಮಾಡಲಾಗುತ್ತದೆ.
PH: 99807 27767


# ಆಶಾದಾಯಕ ಮುಂಗಾರು ನಿರೀಕ್ಷೆ: ಕೃಷಿ ಚಟುವಟಿಕೆ ಚುರುಕು

ಜಗಳೂರು, ಮೇ 28- ತಾಲ್ಲೂಕಿನಲ್ಲಿ ಪೂರ್ವ ಮುಂಗಾರಿನಲ್ಲಿ 64 ಎಂ.ಎಂ. ಮಳೆ ಪ್ರಮಾಣ ನಿರೀಕ್ಷೆ ಇತ್ತು. ಆದರೆ ಈವರೆಗೆ 72 ಎಂ.ಎಂ. ಮಳೆಯಾಗಿದ್ದು, ವಾಡಿಕೆಗಿಂತ ಶೇ. 14 ಮಳೆ ಪ್ರಮಾಣ ಹೆಚ್ಚಾಗಿದೆ. ರೈತರು ತಮ್ಮ ಹೊಲ ಗದ್ದೆಗಳನ್ನು ಹಸನು ಮಾಡಿಕೊಂಡಿದ್ದು, ಮುಂದಿನ ವಾರದಲ್ಲಿ ಬಿತ್ತನೆ ಪ್ರಾರಂಭವಾಗಲಿದೆ ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶ್ರೀನಿವಾಸಲು ಹೇಳಿದರು.

ಪಟ್ಟಣದ ಕೃಷಿ ಇಲಾಖೆಯಲ್ಲಿ ಪತ್ರಕರ್ತರಿಗೆ ಮಾಹಿತಿ ನೀಡಿದ ಅವರು, ತಾಲ್ಲೂಕಿನಲ್ಲಿ 54 ಸಾವಿರ ಹೆಕ್ಟೇರ್ ಬಿತ್ತನೆ ಗುರಿ ಇದ್ದು, ಇದರಲ್ಲಿ ಕಸಬಾ ಹೋಬಳಿ 22 ಸಾವಿರ ಹೆಕ್ಟೇರ್, ಬಿಳಿಚೋಡು 14967 ಹೆಕ್ಟೇರ್, ಸೊಕ್ಕೆ-ಹೊಸಕೆರೆ ಹೋಬಳಿ 17,011 ಹೆಕ್ಟೇರ್ ಬಿತ್ತನೆ ಪ್ರಮಾಣ ಇದೆ. ಮುಂಗಾರು ಹಂಗಾಮು ಬಿತ್ತನೆಗೆ ಬೇಕಾದ ಅಗತ್ಯ ಬಿತ್ತನೆ ಬೀಜ, ರಸಗೊಬ್ಬರ, ಔಷಧಗಳ ದಾಸ್ತಾನು ಸಂಗ್ರಹವಾಗಿದೆ. ಇನ್ನು ಎರಡು ದಿನಗಳಲ್ಲಿ ರೈತರಿಗೆ ವಿತರಿಸಲಾಗುವುದು ಎಂದರು.

ಬಿತ್ತನೆ ಬೀಜ, ರಸಗೊಬ್ಬರ, ಔಷಧ ವಿತರಿಸಲು ತಾಲ್ಲೂಕಿನಾದ್ಯಂತ 8 ವಿತರಣಾ ಕೇಂದ್ರಗಳನ್ನು ತೆರೆಯಲಾಗಿದೆ. ಕಸಬಾ ಹೋಬಳಿಯಲ್ಲಿ ಎಪಿಎಂಸಿ ಆವರಣದಲ್ಲಿ ಎರಡು ಘಟಕ, ಬಿಳಿಚೋಡು ಹೋಬಳಿ ಯಲ್ಲಿ ಆರ್‌ಎಸ್‌ಕೆ ಹಾಗೂ ಹಾಲೇಕಲ್ ಸಹಕಾರ ಸೊಸೈಟಿ, ಪಲ್ಲಾಗಟ್ಟೆ ಕೊಂಡುಕುರಿ ಸಂರಕ್ಷಣಾ ಕೇಂದ್ರಗಳಲ್ಲಿ ವಿತರಿಸಿದರೆ, ಸೊಕ್ಕೆ ಹೋಬಳಿಯಲ್ಲಿ ಹೊಸಕೆರೆ ಆರ್‌ಎಸ್‌ಕೆ ಸೊಕ್ಕೆ, ಬಸವನಕೋಟೆ ಸಹಕಾರಿ ಸೊಸೈಟಿಗಳಲ್ಲಿ ವಿತರಿಸಲಾಗುವುದು.

> ರಸಗೊಬ್ಬರ 6600 ಮೆಟ್ರಿಕ್ ಟನ್ ಅಗತ್ಯವಿದ್ದು, ಇದರಲ್ಲಿ 3,000 ಮೆಟ್ರಿಕ್ ಟನ್ ಮುಂಗಡ ದಾಸ್ತಾನು ಮಾಡಲಾಗಿದೆ. ಅಧಿಕ ದರಕ್ಕೆ ರಸಗೊಬ್ಬರ ಮಾರಾಟ ಮಾಡಿದ್ದು ಕಂಡುಬಂದಲ್ಲಿ ತಕ್ಷಣ ಅವರ ಪರವಾನಿಗೆ ರದ್ದು ಮಾಡಿ, ದೂರು ದಾಖಲಿಸಲಾಗುವುದು.
> 
> - ಶ್ರೀನಿವಾಸಲು
> ಸಹಾಯಕ ನಿರ್ದೇಶಕರು,
> ಕೃಷಿ ಇಲಾಖೆ, ಜಗಳೂರು

ರೈತರಿಗೆ ಗರಿಷ್ಠ ಐದು ಎಕರೆವರೆಗೆ ಒಬ್ಬ ರೈತರಿಗೆ ವಿತರಿಸಲಾಗುವುದು. ಕಡ್ಡಾಯವಾಗಿ ಆಧಾರ್ ಕಾರ್ಡ್ ತರಬೇಕು ಎಂದು ಮಾಹಿತಿ ನೀಡಿದರು.

ರಿಯಾಯ್ತಿ ದರಗಳಲ್ಲಿ ಬಿತ್ತನೆ ಬೀಜ ವಿತರಣೆ ಮಾಡಲಾಗುವುದು. ಅದರಲ್ಲಿ ಮೆಕ್ಕೆಜೋಳ ಬೀಜ ಒಂದು ಕೆ.ಜಿ ಗೆ ಸಾಮಾನ್ಯ ರೈತರಿಗೆ 20 ರೂ ಎಸ್ಸಿ,ಎಸ್ಟಿ ರೈತರಿಗೆ 39 ರೂ. ರಿಯಾಯ್ತಿ ಇದ್ದು, ಶೇಂಗಾ ಬೀಜಕ್ಕೆ ಸಾಮಾನ್ಯ ವರ್ಗದ ರೈತರಿಗೆ ಒಂದು ಕೆ.ಜಿ.ಗೆ 18 ರೂ. ಎಸ್ಸಿ, ಎಸ್ಟಿ ರೈತರಿಗೆ 22 ರೂ. ಸಹಾಯಧನ, ಸೂರ್ಯಕಾಂತಿ ಬಿತ್ತನೆ ಬೀಜ ಸಾಮಾನ್ಯ ರೈತರಿಗೆ 80 ರೂ. ಎಸ್ಸಿ, ಎಸ್ಟಿ ರೈತರಿಗೆ 120 ರೂ. ಸಹಾಯಧನ, ತೊಗರಿ ಬೀಜ ಸಾಮಾನ್ಯ ರೈತರಿಗೆ 25 ಎಸ್ಸಿ-ಎಸ್ಟಿ ರೈತರಿಗೆ 32.50 ರೂ. ಸಹಾಯಧನದ ರಿಯಾಯ್ತಿ ದರದಲ್ಲಿ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು.

ಡಿಎಪಿ ಕನಿಷ್ಠ ದರ 550 ರಿಂದ ಗರಿಷ್ಠ 1200, ಎನ್‌ಪಿಸಿ 20:13 ಕನಿಷ್ಠ 975 ರಿಂದ ಗರಿಷ್ಠ 1090 ಎನ್‌ಪಿಸಿ 10:26 1175 ರಿಂದ ಗರಿಷ್ಠ 1390 ಎಸ್‌ಎಸ್‌ಪಿ 495 ರಿಂದ 635 ರೂ. ವಿವಿಧ ರೀತಿಯ ದರ ಇದ್ದು, ಎಲ್ಲಾ ಗೊಬ್ಬರ ಅಂಗಡಿಗಳ ಮುಂಭಾಗ ರೈತರಿಗೆ ಕಾಣುವಂತೆ ದರ ಪಟ್ಟಿ ಹಾಕಬೇಕು ಎಂದು ರಿಟೇಲ್‌ದಾರರಿಗೆ ತಿಳಿಸಲಾಗಿದೆ.

ಮುಂಗಾರು ಹಂಗಾಮಿನ ಬೆಳೆಗಳಿಗೆ ಅಗತ್ಯ ಔಷಧ ಸಂಗ್ರಹ ಕೂಡ ಇದೆ. ರೈತರು ಅಕ್ಕಡಿ ಬೆಳೆಗೆ ಆದ್ಯತೆ ನೀಡಬೇಕು. ಹೆಚ್ಚಿನ ಮಾಹಿತಿಗೆ ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡುವಂತೆ ಶ್ರೀನಿವಾಸಲು ಮನವಿ ಮಾಡಿದ್ದಾರೆ.

## ದೇವಾಂಗ ಸಮಾಜದಿಂದ ದಿನಸಿ ಕಿಟ್

ರಾಣೇಬೆನ್ನೂರು, ಮೇ 28- ಶೇ. 70 ಕ್ಕೂ ಹೆಚ್ಚು ಬಡವರೇ ಇರುವ ನೇಕಾರ ಸಮೂಹಕ್ಕೆ ಕೋವಿಡ್ ಸಂಕಷ್ಟ ತಂದಿದೆ. ಮಗ್ಗಗಳು ಬಂದ್ ಆಗಿದ್ದು ಕೆಲಸವಿಲ್ಲದೆ ನೇಕಾರ ಸಮೂಹ ಅತೀ ಹೆಚ್ಚು ತೊಂದರೆ ಅನುಭವಿಸುತ್ತಿದೆ ಎಂದು ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ಹೇಳಿದರು.

ದೇವಾಂಗ ಸಮಾಜ ಹಾಗೂ ಗಾಯತ್ರಿ ಸಹಕಾರಿ ಸಂಘ ಜಂಟಿಯಾಗಿ ದೇವಾಂಗ ಸಮಾಜದ ಬಡವರಿಗೆ ದಿನಸಿ ಕಿಟ್ ವಿತರಿಸಿ ಮಾತನಾಡಿದರು.

ಪ್ರತಿದಿನ ದುಡಿದು, ದಿನಸಿ ತಂದು ಊಟ ಮಾಡುವ ನಗರದಲ್ಲಿನ ಕಡು ಬಡವರನ್ನು ಗುರುತಿಸಲಾಗಿದ್ದು, ಅವರೆಲ್ಲರಿಗೂ ಒಂದು ತಿಂಗಳಿಗೆ ಸಾಕಾಗುವಷ್ಟು ದಿನಸಿ ಕಿಟ್‌ನಲ್ಲಿದೆ, ಸಮಾಜದಲ್ಲಿನ ಉಳ್ಳವರು ಇಲ್ಲದವರಿಗೆ ಸಂಕಷ್ಟ ಕಾಲದಲ್ಲಿ ಸಹಾಯ ಮಾಡುವ ಸದ್ಬುದ್ಧಿ ಇನ್ನಷ್ಟು ಹೆಚ್ಚಾಗಲಿ ಎಂದು ಕೇಲಗಾರ ಆಶಯ ವ್ಯಕ್ತಪಡಿಸಿದರು.

ಸಮಾಜದ ಮುಖಂಡರುಗಳಾದ ಬಸವರಾಜ ಲಕ್ಷ್ಮೇಶ್ವರ, ನಾಗರಾಜ ಲಕ್ಷ್ಮೇಶ್ವರ, ಅಶೋಕ ದುರ್ಗದಸೀಮಿ, ಗಣೇಶ ಸಿರಗೂರ, ಬಸವರಾಜ ಮೈಲಾರ, ಗಣೇಶ ಲಕ್ಷ್ಮೇಶ್ವರ, ಗಣೇಶ ಹಾವನೂರ, ಗಣೇಶ ಸಾಲಗೇರಿ, ಸಂಕಪ್ಪ ಮಾರನಾಳ, ಶಿವಪ್ಪ ಹೆದ್ದೇರಿ, ರಮೇಶ ದುರ್ಗದಸೀಮಿ, ಎ.ಎ. ಹರಿಹರ ಮತ್ತಿತರರಿದ್ದರು.


ರಾಣೇಬೆನ್ನೂರು

## ಕವನ ಸ್ಪರ್ಧೆ

ದಾವಣಗೆರೆ, ಮೇ 28- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ ಕವನ ವಾಚನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

'ವಿಶ್ವ ಪರಿಸರ ದಿನಾಚರಣೆ' ವಿಷಯವಾಗಿ ಕವಿ-ಕವಯತ್ರಿಯರು 20 ರಿಂದ 25 ಸಾಲುಗಳ ಸ್ವರಚಿತ ಕವನ ವಾಚನ ಮಾಡಿ ಮೊಬೈಲ್‌ನಲ್ಲಿ ಚಿತ್ರೀಕರಿಸಿ, ಜೂನ್ 6 ರೊಳಗೆ 9448535545 ಈ ವ್ಯಾಟ್ಸಾಪ್ ನಂಬರ್‌ಗೆ ಕಳಿಸಬೇಕು ಎಂದು ಪ್ರಧಾನ ಸಂಪಾದಕ ಪಿ.ಕೆ. ನರಸಿಂಹಮೂರ್ತಿ ತಿಳಿಸಿದ್ದಾರೆ.

ವಿವರಕ್ಕೆ 9901122728 ಕ್ಕೆ ಸಂಪರ್ಕಿಸಬಹುದು.

## ನೇಕಾರರಿಗೆ 5 ಸಾವಿರ ರೂ. ಪರಿಹಾರ ಘೋಷಣೆಗೆ ಕೊಂಡಯ್ಯ ಮನವಿ

ದಾವಣಗೆರೆ, ಮೇ 28- ಲಾಕ್‌ಡೌನ್‌ನಿಂದ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿರುವವರ ನೆರವಿಗಾಗಿ ರಾಜ್ಯ ಸರ್ಕಾರ ಘೋಷಿಸಿರುವ 1,250 ಕೋಟಿ ರೂಪಾಯಿಗಳ ವಿಶೇಷ ಪ್ಯಾಕೇಜ್‌ನಲ್ಲಿ ನೇಕಾರ ಸಮುದಾಯವನ್ನು ಕಡೆಗಣಿಸಿರುವುದು ಖಂಡನಾರ್ಹ ಎಂದು ವಿಧಾನ ಪರಿಷತ್ ಸದಸ್ಯ ಕೆ.ಸಿ. ಕೊಂಡಯ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಉತ್ತರ ಕರ್ನಾಟಕದಲ್ಲಿ ಎದುರಾದ ನೆರೆಹಾವಳಿ ಸಂದರ್ಭದಲ್ಲಿ ಮಗ್ಗಗಳನ್ನು ಕಳೆದುಕೊಂಡು ಆರ್ಥಿಕ ಸಂಕಷ್ಟ ಎದುರಿಸಿದ್ದ ನೇಕಾರರು ಬೀದಿಗೆ ಬಿದ್ದಾಗ ಸರ್ಕಾರ ನೆರವಿಗೆ ಬರಲಿಲ್ಲ. ಕಳೆದ ಲಾಕ್‌ಡೌನ್ ಸಂದರ್ಭದಲ್ಲೂ ಸಾಲ ತೀರಿಸಲಾಗದೆ ಸುಮಾರು 13ಕ್ಕೂ ಹೆಚ್ಚು ನೇಕಾರರು ಆತ್ಮಹತ್ಯೆಗೆ ಶರಣಾದರೂ ಯಾವೊಬ್ಬ ಮೃತ ನೇಕಾರ ಕುಟುಂಬಕ್ಕೆ ಪರಿಹಾರವನ್ನು ಸರ್ಕಾರ ಘೋಷಿಸಲಿಲ್ಲ.

ಹಿಂದಿನ ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಸರ್ಕಾರ 2,000 ರೂ. ನೀಡುವುದಾಗಿ ಘೋಷಿಸಿದ್ದು, ಪರಿಹಾರದ ಪ್ರಮಾಣವನ್ನು ಹೆಚ್ಚಿಸಲು ಮನವಿ ಮಾಡಿದ್ದೆವು. ಆದರೆ ಈ ವರ್ಷ ನೇಕಾರ ಸಮುದಾಯವನ್ನು ಕಡೆಗಣಿಸಿದ್ದು, ಯಾವುದೇ ಪರಿಹಾರ ಘೋಷಿಸಿರುವುದಿಲ್ಲ. ರಾಜ್ಯ ಸರ್ಕಾರ ಕಾಯಕ ಸಮಾಜದ ನೇಕಾರರಿಗೂ ವಿಶೇಷ ಪ್ಯಾಕೇಜ್ ಅಡಿಯಲ್ಲಿ ತಲಾ 5,000 ರೂ.ಗಳ ಪರಿಹಾರವನ್ನು ಈ ಕೂಡಲೇ ಘೋಷಿಸುವಂತೆ ಮುಖ್ಯಮಂತ್ರಿಗಳಿಗೆ ಕೊಂಡಯ್ಯ ಮನವಿ ಮಾಡಿದ್ದಾರೆ.

## ಕಾನಾಹೊಸಹಳ್ಳಿ ನಾಡಕಚೇರಿಗೆ ಭೇಟಿ ನೀಡಿದ ತಹಶೀಲ್ದಾರ್ ಟಿ. ಜಗದೀಶ್



ಕೂಡ್ಲಿಗಿ, ಮೇ 28- ತಾಲ್ಲೂಕಿನ ಕಾನಾಹೊಸಹಳ್ಳಿ ಗ್ರಾಮದ ನಾಡಕಚೇರಿಗೆ ತಹಸೀಲ್ದಾರ್ ಟಿ. ಜಗದೀಶ್ ಅವರು ಇಂದು ಭೇಟಿ ನೀಡಿ, ನಾಡ ಕಚೇರಿಯ ಉಪತಹಶೀಲ್ದಾರರು, ಕಚೇರಿಯ ಸಿಬ್ಬಂದಿ ಹಾಗೂ ಹೊಸಹಳ್ಳಿ ಹೋಬಳಿಗೆ ಸಂಬಂಧಪಟ್ಟ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ನಾಡಕಛೇರಿಯ ಉಪತಹಶೀಲ್ದಾರ್ ಚಂದ್ರ ಮೋಹನ್, ಕಂದಾಯ ನಿರೀಕ್ಷಕ ಮುರುಳಿಕೃಷ್ಣ, ಗ್ರಾಮ ಲೆಕ್ಕಾಧಿಕಾರಿಗಳಾದ ಶ್ರೀನಿವಾಸ ಕೊಂಡಿ, ಅಂಬುಜಾಕ್ಷಿ, ಚೈತ್ರ, ಅನಿತಾ,ಮರುಳುಸಿದ್ದಪ್ಪ, ರಾಘವೇಂದ್ರ, ಕೊಟ್ರೇಶ್, ಮುರುಗೇಶ್, ಕಂಪ್ಯೂಟರ್ ಆಪರೇಟರ್ ಮಂಜುನಾಥ್, ಗಾಮ ಸಹಾಯಕ ಬೋರಪ್ಪ ಹಾಜರಿದ್ದರು.

## ಹರಿಹರದಲ್ಲಿ ಹಾಡಹಗಲೇ ಕಳ್ಳತನ

ಹರಿಹರ, ಮೇ 28- ನಗರದ ಕುಂಬಾರ ಓಣಿಯ ರೇಖಾ ರವೀಂದ್ರ ಮೆಹರ್ವಾಡೆ ಎಂಬುವರ ಮನೆಯಲ್ಲಿ ಹಾಡಹಗಲೇ ಕಳ್ಳರು 1.50 ಲಕ್ಷ ರೂ. ಬೆಲೆ ಬಾಳುವ ಬಂಗಾರದ ಆಭರಣಗಳನ್ನು ದೋಚಿದ್ದಾರೆ.

ರೇಖಾ ಮೆಹರ್ವಾಡೆ ನಗರದ ಶ್ರೀ ಹರಿಹರೇಶ್ವರ ಅರ್ಬನ್ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರು ಎಂದಿನಂತೆ ಇಂದು ಬೆಳಿಗ್ಗೆ ತಮ್ಮ ಮಗಳನ್ನು ತಾಯಿಯ ಮನೆಯಲ್ಲಿ ಬಿಟ್ಟು ತಾವು ಕೆಲಸಕ್ಕೆ ಹೋಗಿದ್ದಾರೆ. ನಂತರ ಮಧ್ಯಾಹ್ನ ಮನೆಗೆ ಬಂದಾಗ ಬಾಗಿಲು ಚಿಲಕ ತೆಗೆದುಕೊಂಡಿರುವುದನ್ನು ನೋಡಿ ಗಾಬರಿಯಾಗಿದ್ದಾರೆ. ಗಾಡ್ರೇಜ್ ನೋಡಿದಾಗ ಅದರಲ್ಲಿದ್ದ 15 ಗ್ರಾಂ ನೆಕ್ಲೇಸ್, 30 ಗ್ರಾಂನ ಜುಮುಕಿ, ಸುಮಾರು 20 ಗ್ರಾಂ ಚೈನ್, 3 ಗ್ರಾಂ ಡಾಲರ್ ಹಾಗೂ 14 ಸಾವಿರ ರೂಪಾಯಿ ನಗದನ್ನು ದೋಚಿಕೊಂಡು ಹೋಗಿದ್ದಾರೆ.

ಸ್ಥಳಕ್ಕೆ ನಗರ ಠಾಣೆಯ ಪಿಎಸ್‌ಐ ಸುನಿಲ್ ಬಸವರಾಜ್ ತೆಲಿ ಮತ್ತು ಪೊಲೀಸ್ ಸಿಬ್ಬಂದಿಗಳು, ಬೆರಳಚ್ಚು ತಜ್ಞರು, ಶ್ವಾನದಳದವರು ಭೇಟಿ ನೀಡಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.


**ರಾಜ್ಯ ಮಹಿಳಾ ನಿಲಯದ ನಿವೃತ್ತ ಅಧೀಕ್ಷಕರಾದ**
**ಕೆ. ಶಕುಂತಲಾಬಾಯಿ ನಿಧನ**



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ 3ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ ವಾಸಿ, ಮಾರುತಿ ನಾಗೇಶ್‌ಶೇಟ್ ಅವರ ಪತ್ನಿ, ರಾಜ್ಯ ಮಹಿಳಾ ನಿಲಯದ ನಿವೃತ್ತ ಅಧೀಕ್ಷಕರಾದ **ಶ್ರೀಮತಿ ಕೆ. ಶಕುಂತಲಾಬಾಯಿ** ಅವರು ದಿನಾಂಕ 28.5.2021ರ ಶುಕ್ರವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 71 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಸಹೋದರ, ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.05.2021ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಪಿ.ಬಿ. ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

- ಇಂತಿ ದುಃಖತಪ್ತ ಕುಟುಂಬ ವರ್ಗ,
**ಮಾರುತಿ ನಾಗೇಶ್‌ಶೇಟ್ ಮತ್ತು ಮಕ್ಕಳು,**
ಮೊ. : 98443 45425, 9844248595

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



॥ ಶ್ರೀ ಕಲ್ಲೇಶ್ವರ ಪ್ರಸನ್ನ ॥
ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ಗ್ರಾಮದ ದಿ॥ ಕೆ.ಜಿ. ಶರಣಪ್ಪ ಇವರ ಧರ್ಮಪತ್ನಿ
**ಶ್ರೀಮತಿ ಕೆ. ಶಂಕ್ರಮ್ಮ**
ಇವರು ದಿನಾಂಕ 21-05-2021ನೇ ಶುಕ್ರವಾರ ರಾತ್ರಿ 7-30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ 29.05.2021ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ ಹೆಚ್. ಕಲಪನಹಳ್ಳಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಶ್ರೀಮತಿ, ಶ್ರೀ ಜಿ.ಎಸ್. ಷಣ್ಮುಖಪ್ಪ ಮತ್ತು ಮಕ್ಕಳು
ಶ್ರೀಮತಿ, ಶ್ರೀ ಜಿ.ಎಸ್. ಚಂದ್ರಶೇಖರಪ್ಪ ಮತ್ತು ಮಕ್ಕಳು
ಮತ್ತು ಅಳಿಯಂದಿರು, ಗೌರಜ್ಜರ ವಂಶಸ್ಥರು, ಹೆಚ್. ಕಲಪನಹಳ್ಳಿ ಹಾಗೂ ಬಂಧು-ಮಿತ್ರರು.

**ಭಾವಪೂರ್ಣ ಶ್ರದ್ಧಾಂಜಲಿ**



ದಿ.27-05-21ರಂದು ದೈವಾಧೀನರಾದ ಕೃಷ್ಣ ಬೇಕರಿ ಮಾಲೀಕರಾದ
**ರಮೇಶ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
**ಜಿನೇಶ್ ಟೈಲರ್ಸ್, ದಾವಣಗೆರೆ.**

**ಕೈಲಾಸ ಶಿವಗಣಾರಾಧನೆ**



ದಾವಣಗೆರೆ ಎಸ್ಸೆಸ್ ಬಡಾವಣೆ ಬಿ ಬ್ಲಾಕ್ ವಾಸಿ
**ಶ್ರೀ ಬಸವರಾಜ ಬಿ. ಕೋರಿಶೆಟ್ಟರ**
(ನಿ. ವಾಣಿಜ್ಯತೆರಿಗೆ ಇನ್‌ಸ್ಪೆಕ್ಟರ್)
ಇವರ ಹಿರಿಯ ಪುತ್ರನಾದ
ವಿಶ್ವನಾಥ ಬಿ. ಕೋರಿಶೆಟ್ಟರ ಇವರ ಧರ್ಮಪತ್ನಿ
**ಶ್ರೀಮತಿ ಗೀತಾ (45)**
ಇವರು ದಿ.: 22.05.21ನೇ ಶನಿವಾರ ಬೆಳಿಗ್ಗೆ 12.30ಕ್ಕೆ ಅಕಾಲಿಕ ಶಿವಾಧೀನರಾಗಿದ್ದು, ಅಂದೇ ಸಂಜೆ ಶಾಮನೂರಿನ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ತತ್ಸಂಬಂಧ **ಕೈಲಾಸ ಶಿವಗಣಾರಾಧನೆ**ಯನ್ನು ದಿ. 30.05.2021ರ ಭಾನುವಾರ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ಕೊರೊನಾ ಪ್ರಯುಕ್ತ ಆಪ್ತ ಬಂಧು-ಮಿತ್ರರು ಇದ್ದಲ್ಲಿಂದಲೇ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ○ ಮಕ್ಕಳು ಕು. ವಿಭಾ, ವಿಶಾನ
○ ಶ್ರೀಮತಿ ವಾಣಿ ಶಶಿಧರ ಕೋರಿ ಶೆಟ್ಟರ ಮತ್ತು ಮಕ್ಕಳು
○ ಶ್ರೀಮತಿ ನಿರ್ಮಲ ವಿರೂಪಾಕ್ಷಪ್ಪ ಅಂಗಡಿ ಮತ್ತು ಮಕ್ಕಳು, ಬೆಂಗಳೂರು.
○ ತಂದೆ-ತಾಯಿ ಶ್ರೀಮತಿ ನಿರ್ಮಲ ವಿರೂಪಾಕ್ಷಪ್ಪ, ಮಾನ್ವಿ ಮತ್ತು ಮಕ್ಕಳು ಹುಬ್ಬಳ್ಳಿ
○ ಕೋರಿಶೆಟ್ಟರ ಸಹೋದರರು ಹಾಗೂ ಬಂಧು-ಬಳಗ
98865 73670, 98454 74694, 99162 80818


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 25.05.2021ರಂದು ನಿಧನರಾದ ಕೊಮಾರನಹಳ್ಳಿ ಗ್ರಾಮದ ಜನಪ್ರಿಯ ಮುಖಂಡರೂ, ಹಾಲಿವಾಣ ಗ್ರಾ.ಪಂ. ಮಾಜಿ ಸದಸ್ಯರೂ, ಶ್ರೀ ಬೀರಲಿಂಗೇಶ್ವರ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿಯ ನಿರ್ದೇಶಕರೂ, ನ್ಯಾಯಬೆಲೆ ಅಂಗಡಿ ಹಾಗೂ ಭೂದೇವಿ ಫರ್ಟಿಲೈಜರ್ಸ್ ಮಾಲೀಕರೂ, ನಮ್ಮ ಸಹಕಾರ ಸಂಘದ ಮಾಜಿ ಅಧ್ಯಕ್ಷರೂ ಆದ
**ಶ್ರೀ ಎಸ್. ರಂಗಪ್ಪ**
ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.
**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ನಿ. ಮಲೇಬೆನ್ನೂರು**
ಶ್ರೀಮತಿ ನಾಗರತ್ನಮ್ಮ ಕೆ.ಜಿ. ಪರಮೇಶ್ವರಪ್ಪ, ಅಧ್ಯಕ್ಷರು — ಎ.ಕೆ. ನರಸಿಂಹಪ್ಪ, ಉಪಾಧ್ಯಕ್ಷರು
*ನಿರ್ದೇಶಕರುಗಳಾದ :* ಸಿರಿಗೆರೆ ರಾಜಣ್ಣ , ಜಿ. ಮಂಜುನಾಥ್ ಪಟೇಲ್, ಕೆ.ಪಿ. ಗಂಗಾಧರ್, ಸಿ.ಬಿ. ಅಬ್ದುಲ್ ಹಾದಿ, ಬಿ.ಸೈಫುಲ್ಲಾ, ಎಂ.ಬಿ. ಗುಲ್ಜಾರ್ ಅಹ್ಮದ್, ಪಿ.ಆರ್.ಕುಮಾರ್, ಮಹಮದ್ ಯುನೂಸ್, ಶ್ರೀಮತಿ ಚಂದ್ರಮ್ಮ ಶ್ರೀಮತಿ ರೇವಮ್ಮ ಐರಣಿ ಪುಟ್ಟಪ್ಪ
*ಸಿಬ್ಬಂದಿ ವರ್ಗ :* ಬಿ.ಸಿದ್ದಪ್ಪ, ಸಿಇಓ, ಪಿ. ಪ್ರಕಾಶ್, ಜಾಫರ್ ಅಲಿಖಾನ್, ಗುಮಾಸ್ತರು ಮಹಮ್ಮದ್ ಅಲಿ ಸಿಪಾಯಿ, ಕೆ.ಎನ್ ಬಸಪ್ಪ ಪಿಗ್ಮಿ ಸಂಗ್ರಹಕಾರ.

**ಆನೆಕೊಂಡದ ರಾಮಗಿರಿ ಬಸವರಾಜಪ್ಪ ನಿಧನ**



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ 2ನೇ ಹಂತ, 5ನೇ ಕ್ರಾಸ್ ವಾಸಿ ಆನೆಕೊಂಡದ
**ರಾಮಗಿರಿ ಬಸವರಾಜಪ್ಪ**
ಇವರು ದಿನಾಂಕ 28.05.2021ರ ಶುಕ್ರವಾರ ಬೆಳಗಿನ ಜಾವ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.05.2021ರ ಶುಕ್ರವಾರ ಮಧ್ಯಾಹ್ನ 1.30ಕ್ಕೆ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.
**ದುಃಖತಪ್ತ ಕುಟುಂಬ ವರ್ಗ**
99724 74755

**ಭಾವಪೂರ್ಣ ಶ್ರದ್ಧಾಂಜಲಿ**




ದಿನಾಂಕ 28.05.2021ರಂದು ನಿಧನರಾದ ಕುಂದವಾಡ ರಸ್ತೆಯ ಮಾರುತಿ ಸಿಮೆಂಟ್ & ಸ್ಟೀಲ್ ಅಂಗಡಿ ಮಾಲೀಕರೂ, ನಮ್ಮೆಲ್ಲರ ಆತ್ಮೀಯ ಸ್ನೇಹಿತ, ಸೌಮ್ಯ ಸ್ವಭಾವದ ನಮ್ಮಣ್ಣ
**ಶ್ರೀ ಬಿ. ನಾಗರಾಜ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ಎಂ.ಸಿ. ನಾಗರಾಜು, ಶ್ರೀ ಎಂಟರ್ ಪ್ರೈಸಸ್
✦ ಹೆಚ್.ಆರ್. ಪರಮೇಶ್, ಕಲ್ಲೇಶ್ವರ ಏಜೆನ್ಸಿ
✦ ವೈ. ರುದ್ರೇಶ್, ಸಿದ್ದಲಿಂಗೇಶ್ವರ ಸಿಮೆಂಟ್ಸ್
✦ ನಾಗರಾಜ್, ವಿಘ್ನೇಶ್ವರ ಸಿಮೆಂಟ್ಸ್
✦ ಸಂಕೋಳ್ ಲಿಂಗರಾಜು, ನಾರದಮುನಿ ಟ್ರೇಡರ್ಸ್
✦ ಹೆಚ್.ಎಸ್. ಲಿಂಗರಾಜು, ಹೊನ್ನಾಳಿ ಸಿಮೆಂಟ್ಸ್
✦ ಎಂ.ಜೆ. ಗಿರೀಶ್, ಬಕ್ಕೇಶ್ವರ ಟ್ರೇಡರ್ಸ್
✦ ಎನ್. ಶಂಕರ್ ✦ ಜೆ.ಬಿ. ಶ್ರೀಧರ್, ವಿಶ್ವಾಸ್ ಸ್ಟೀಲ್ಸ್

**Online ಯೋಗ ಕ್ಲಾಸ್**
ಪ್ರತಿನಿತ್ಯ ಯೋಗಾಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ, ಧ್ಯಾನದ ಆನ್‌ಲೈನ್ (Online) ತರಗತಿಗಳಿಗೆ ಸಂಪರ್ಕಿಸಿರಿ.
ದಿವ್ಯ ಯೋಗ ಮಂದಿರ, ದಾವಣಗೆರೆ.
99726 00713

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಡಾ॥ ಎಸ್.ಎಂ. ಬಾಷಾ (ಹರಿಹರ ಬಾಷಾ ಡಾಕ್ಟರ್) ನಿಧನ**



ದಾವಣಗೆರೆ ಭಗತ್ ಸಿಂಗ್ ನಗರ, 12ನೇ ಕ್ರಾಸ್, ಕೆಎಸ್‌ಆರ್‌ಟಿಸಿ ಹಿಂದಿನ ರಸ್ತೆ ವಾಸಿ, ಡಾ॥ ಎಸ್.ಎಂ. ಬಾಷಾ (ಹರಿಹರ ಬಾಷಾ ಡಾಕ್ಟರ್) (69) ಅವರು ದಿನಾಂಕ 28.05.2021ರ ಶುಕ್ರವಾರ ರಾತ್ರಿ 10.45 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.5.2021ರ ಶನಿವಾರ ಮಧ್ಯಾಹ್ನ ಚಿತ್ರದುರ್ಗದ ಬಡೇ ಮಕಾನ್‌ನಲ್ಲಿ ನೆರವೇರಲಿದೆ.

**ಭಾವಪೂರ್ಣ ಶ್ರದ್ಧಾಂಜಲಿ**




ದಿನಾಂಕ 27.05.21ರಂದು ನಿಧನರಾದ ಗಣ್ಯ ವರ್ತಕರೂ, ನಮ್ಮ ಸಂಘದ ಸದಸ್ಯರೂ ಆಗಿದ್ದ
**ಶ್ರೀ ಐನಳ್ಳಿ ವಿಶ್ವನಾಥ್**
ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಶ್ರೀ ಗುರು ಬಕ್ಕೇಶ್ವರ ಸ್ವಾಮಿಯು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು ಮತ್ತು ಸದಸ್ಯರುಗಳು
**ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ಸೇವಾ ಸಂಘ (ರಿ.)**
ಹಾಗೂ **ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ರಥೋತ್ಸವ ಸಮಿತಿ** ಚೌಕಿಪೇಟೆ, ದಾವಣಗೆರೆ- 01

**ಭಾವಪೂರ್ಣ ಶ್ರದ್ಧಾಂಜಲಿ**



ದಿ. 27.05.21ರಂದು ನಿಧನರಾದ ನಮ್ಮ ಆತ್ಮೀಯ ಸ್ನೇಹಿತರಾಗಿದ್ದ
**ಶ್ರೀ ಐನಳ್ಳಿ ವಿಶ್ವನಾಥ್ (ವಿಶ್ವಣ್ಣ)**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಶ್ರೀ ಗುರು ಬಕ್ಕೇಶ್ವರ ಸ್ವಾಮಿಯು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.
**ಶ್ರೀ ಬಾದಾಮಿ ರುದ್ರೇಶ್ ಮತ್ತು ಕುಟುಂಬ ವರ್ಗದವರು**
ಪಿ.ಜೆ. ಬಡಾವಣೆ, ದಾವಣಗೆರೆ.

# ಐಸಿಎಆರ್‌ನಿಂದ ರೈತರಿಗೆ ಕಾರ್ಯಾಗಾರ




ದಾವಣಗೆರೆ, ಮೇ 28- ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಆಚರಣೆಯ ಅಂಗ ವಾಗಿ ಅಂತರ್ಜಾಲದಲ್ಲಿ ಭತ್ತದಲ್ಲಿ ನೇರ ಕೂರಿಗೆ ಬಿತ್ತನೆ ಬಗ್ಗೆ ತರಬೇತಿಯನ್ನು ನಡೆಸಲಾಯಿತು.

ಕೇಂದ್ರದ ಬೇಸಾಯ ತಜ್ಞ ಮಲ್ಲಿಕಾರ್ಜುನ್ ಅವರು ಭತ್ತ ದಾವಣಗೆರೆ ಜಿಲ್ಲೆಯ ಪ್ರಮುಖವಾದ ಬೆಳೆ ಭತ್ತದ ಬೆಳೆಯಲ್ಲಿ ಅಧಿಕ ಖರ್ಚು ಆಗುವುದರಿಂದ ಭತ್ತ ಲಾಭದಾಯಕವಾಗಿ ಕಾಣುತ್ತಿಲ್ಲ. ಆದ್ದರಿಂದ ರೈತರು ನೇರ ಕೂರಿಗೆ ಭತ್ತದ ಬಿತ್ತನೆಯ ಬಗ್ಗೆ ಚಿಂತೆ ಮಾಡಬೇಕು ಹಾಗೂ ಇದರ ಸಂಪೂರ್ಣ ಬೇಸಾಯ ಕ್ರಮಗಳನ್ನು ತರಬೇತಿಯಲ್ಲಿ ಆನ್‌ಲೈನ್ ಮೂಲಕ ರೈತರಲ್ಲಿ ಹಂಚಿಕೊಂಡರು.

ನೀರಿನ ಬಳಕೆಯಲ್ಲಿ ಸಾಮಾನ್ಯ ಪದ್ಧತಿಗೆ ಹೋಲಿಸಿದರೆ, ನೇರ ಕೂರಿಗೆ ಬಿತ್ತನೆ ಪದ್ಧತಿಯಲ್ಲಿ ಶೇ. 30 ರಿಂದ 40 ರಷ್ಟು ಉಳಿತಾಯ ಮಾಡಬಹುದು. ಖರ್ಚಿನ ವಿಚಾರಕ್ಕೆ ಬಂದಾಗ ಒಂದು ಎಕರೆ ಪ್ರದೇಶಕ್ಕೆ ಕನಿಷ್ಠ ಐದು ಸಾವಿರ ರೂ.ಗಳನ್ನು ಉಳಿಸಬಹುದು. ಇಳುವರಿಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಈ ಪದ್ಧತಿಯನ್ನು ಅನೇಕ ಗ್ರಾಮಗಳಲ್ಲಿ ಅನುಸರಿಸಿದ್ದಾರೆ.

ಅದರಲ್ಲಿ ಹಾಲುವರ್ತಿ ಗ್ರಾಮದ ಮಳೆಯಾಶ್ರಿತ ಪ್ರದೇಶದಲ್ಲಿ ಪ್ರಗತಿಪರ ರೈತ ದ್ಯಾಮಣ್ಣನವರು ಕಳೆದ ಸಾಲಿನಲ್ಲಿ ಈ ಪದ್ಧತಿಯನ್ನು ಮೆಕ್ಕೆಜೋಳ ಬೆಳೆಯುವ ತಾಕಿನಲ್ಲಿ ಬೆಳೆದು ಯಶಸ್ವಿಯಾಗಿದ್ದರು. ಇದೇ ರೀತಿ ಭತ್ತ ಬೆಳೆಯುವ ಪ್ರದೇಶಗಳಲ್ಲೂ ಸಹ ನಲ್ಕುದುರೆ, ತ್ಯಾವಣಗಿ, ಹರಿಹರ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಖುಷಿ ಇಲಾಖೆಯೊಂದಿಗೆ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಮಾಡಿರುತ್ತೇವೆ ಎಂದು ತಜ್ಞರ ಅಭಿಪ್ರಾಯ ಪಟ್ಟರು.

ಅಂತರ್ಜಾಲ ಕಾರ್ಯಕ್ರಮದಲ್ಲಿ ಕೇಂದ್ರದ ವಿಸ್ತರಣಾ ತಜ್ಞ ರಘುರಾಜ್ ಹಾಗೂ ಪ್ರಗತಿಪರ ರೈತರು ಭಾಗವಹಿಸಿದ್ದರು.

## ಬಂಗಾಳ : ರಾಜಕೀಯ ಚಂಡಮಾರುತ

**(1ನೇ ಪುಟದಿಂದ)** ಪ್ರತಿಪಕ್ಷಗಳ ನಾಯಕರನ್ನೂ ಸಭೆಗೆ ಆಹ್ವಾನಿಸಲಾಗಿತ್ತು. ಆದರೆ, ಕೊರೊನಾ ಸೋಂಕಾಗಿದ್ದ ಕಾರಣಕ್ಕೆ ಒಡಿಶಾದ ಪ್ರತಿಪಕ್ಷದ ನಾಯಕ ಸಭೆಗೆ ಬಂದಿರಲಿಲ್ಲ ಎಂದು ಮೂಲಗಳು ಹೇಳಿವೆ.

ನಂತರದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಒಡಿಶಾ, ಪಶ್ಚಿಮ ಬಂಗಾಳ ಹಾಗೂ ಜಾರ್ಖಂಡ್ ರಾಜ್ಯಗಳಿಗೆ ಚಂಡಮಾರುತ ಪರಿಹಾರವಾಗಿ ಸಾವಿರ ಕೋಟಿ ರೂ.ಗಳ ಪರಿಹಾರ ಪ್ರಕಟಿಸಿದ್ದಾರೆ.

# ಕೋವಿಡ್ ಸೋಂಕಿತರಿಗೆ ಉಚಿತ ಟೆಲಿಕನ್ಸಲ್ಟೇಷನ್

## ಎಸ್.ಎಸ್.ವೈದ್ಯಕೀಯ ಕಾಲೇಜಿಗೆ ರಾಜ್ಯ ಸರ್ಕಾರ, ರಾಜೀವ್ ಗಾಂಧಿ ರೋಗ್ಯ ವಿವಿಯಿಂದ ಪ್ರಶಂಸೆ



ದಾವಣಗೆರೆ, ಮೇ 28- ಎಸ್.ಎಸ್. ವೈದ್ಯಕೀಯ ಕಾಲೇಜು - ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರವು ಕರ್ನಾಟಕ ರಾಜ್ಯ ಸರ್ಕಾರ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಹಾಗೂ ಸ್ಟೆಪ್ ಒನ್ ಫ್ರೆಶ್‌ಡೆಸ್ಕ್ ಸಹಯೋಗದೊಂದಿಗೆ ಕೋವಿಡ್ – 19 ರೋಗಿಗಳಿಗೆ ಉಚಿತ ಹೋಂ ಐಸೋಲೇಷನ್ - ಟೆಲಿಕನ್ಸ ಲ್ಟೇಷನ್ ಚಿಕಿತ್ಸಾ ಕಾರ್ಯಕ್ರಮವನ್ನು ಆರಂಭಿಸಿದೆ.

ಈ ಕಾರ್ಯಕ್ರಮವು ಮಾಜಿ ಸಚಿವರೂ ಆಗಿರುವ ಎಸ್.ಎಸ್. ವೈದ್ಯಕೀಯ ಕಾಲೇಜಿನ ಛೇರ್ಮನ್ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಮಾರ್ಗದರ್ಶನದಡಿಯಲ್ಲಿ ಎಸ್.ಎಸ್. ಹೈಟೆಕ್ ಕಾಲೇಜಿನ ಪ್ರಾಂಶುಪಾಲ ಡಾ|| ಬಿ. ಎಸ್.ಪ್ರಸಾದ್ ಅವರ ಮುಂದಾಳತ್ವದಲ್ಲಿ ಮೇ ತಿಂಗಳ ಮೊದಲನೇ ವಾರದಿಂದ ಪ್ರಾರಂಭಗೊಂಡಿದೆ.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಿಂದ ಆಯ್ಕೆಯಾಗಿ ತರಬೇತಿ ಪಡೆದ ಈ ಕಾಲೇಜಿನ ಮಾಸ್ಟರ್ ಟ್ರೇನರ್ಸ್‌ಗಳಾದ ಡಾ|| ಎಂ.ಬಸವರಾಜಪ್ಪ, ಡಾ|| ಜಿ. ಎಸ್.ಲತಾ, ಡಾ|| ಜೆ.ಮಂಜುನಾಥ್, ಡಾ|| ವಿ.ಎಸ್.ಹರೀಶ್ ಕುಮಾರ್, ಡಾ|| ಎನ್. ಮೃತ್ಯುಂಜಯ ಅವರುಗಳು ಅಂತಿಮ ವರ್ಷದ 130 ವೈದ್ಯಕೀಯ ವಿದ್ಯಾರ್ಥಿಗಳನ್ನು ಹಾಗೂ 15 ಜನ ತಜ್ಞ ವೈದ್ಯರುಗಳನ್ನು ತರಬೇತಿಗೊಳಿಸಿ, ಈ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ.

ಐ.ಸಿ.ಎಂ.ಆರ್ ಪೋರ್ಟಲ್‌ನಲ್ಲಿ ಕೋವಿಡ್ ಪಾಸಿಟಿವ್ ಎಂದು ದಾಖಲೆಗೊಂಡಿರುವ ರೋಗಿಗಳಿಗೆ ದೂರವಾಣಿ ಕರೆಗಳ ಮುಖಾಂತರ ಸೌಜನ್ಯ ಪೂರ್ವಕವಾಗಿ ಮಾತನಾಡಿಸಿ, ರೋಗಿಗಳ ಮಾನಸಿಕ ಸ್ಥಿತಿಯನ್ನು ಸದೃಢಗೊಳಿಸಿ, ಇವರಲ್ಲಿ ರೋಗ ಲಕ್ಷಣಗಳಿಲ್ಲದ ಹಾಗೂ ತೀವ್ರತರದ ರೋಗ ಲಕ್ಷಣಗಳಿಲ್ಲದ ಕೋವಿಡ್ ಪಾಸಿಟಿವ್ ರೋಗಿಗಳನ್ನು ಸಮರ್ಥವಾಗಿ ವಿಂಗಡಿಸಿ, ತಜ್ಞ ವೈದ್ಯರುಗಳ ಮಾರ್ಗದರ್ಶನದೊಂದಿಗೆ ವಿದ್ಯಾರ್ಥಿಗಳು ಸೂಕ್ತ ಚಿಕಿತ್ಸೆ ಹಾಗೂ ಸಲಹೆ - ಸಮಾಲೋಚನೆಯನ್ನು ನೀಡಿ, ರೋಗಿಗಳಲ್ಲಿ ಆತ್ಮವಿಶ್ವಾಸ ತುಂಬುತ್ತಿದ್ದಾರೆ.

ಚಿಕ್ಕ ಮಕ್ಕಳು, ಗರ್ಭಿಣಿ ಸ್ತ್ರೀಯರು, ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ, ಕ್ಯಾನ್ಸರ್‌ನಂತಹ ಇತರೆ ಕಾಯಿಲೆಗಳಿರುವ ಕೋವಿಡ್ ಪಾಸಿಟಿವ್ ರೋಗಿಗಳಿಗೆ ತಜ್ಞ ವೈದ್ಯರುಗಳ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಚಿಕಿತ್ಸೆ ಹಾಗೂ ಸಮಾಲೋಚನೆ ಮಾಡಲಾಗುತ್ತಿದೆ.

ಈ ಕಾರ್ಯಕ್ರಮದಿಂದ ಕರ್ನಾಟಕದಾದ್ಯಂತ ಇದುವರೆಗೂ 20 ಸಾವಿರಕ್ಕೂ ಅಧಿಕ ಕೋವಿಡ್ ಪಾಸಿಟಿವ್ ರೋಗಿಗಳೊಂದಿಗೆ ಕಾಲೇಜಿನ ವಿದ್ಯಾರ್ಥಿಗಳು ಸಮಾಲೋಚಿಸಿದ್ದು, ರೋಗಿಗಳು ಇದರ ಪ್ರಯೋಜನ ಪಡೆದು ಗುಣಮುಖರಾಗಿದ್ದಾರೆ. ಇದರಿಂದಾಗಿ ಕೋವಿಡ್-19 ಸೋಂಕನ್ನು ಮತ್ತಷ್ಟು ಹರಡದಂತೆ ತಡೆಗಟ್ಟಿ ಅತ್ಯಗತ್ಯವಾಗಿ ವೈದ್ಯಕೀಯ ಸೌಲಭ್ಯಗಳ ಅಗತ್ಯವಿರುವಂತಹ ರೋಗಿಗಳಿಗೆ ತಜ್ಞ ವೈದ್ಯರುಗಳು ಗಮನ ಹರಿಸುವಲ್ಲಿ ಸಹಕಾರಿಯಾಗುತ್ತಿದೆ.

ಈ ಕಾಲೇಜಿನ ಉಚಿತ ಸೇವೆಯನ್ನು ಕರ್ನಾಟಕ ಸರ್ಕಾರ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಶ್ಲಾಘಿಸಿ, ಕಾಲೇಜಿನ ಪ್ರಾಂಶುಪಾಲ ಡಾ|| ಬಿ.ಎಸ್. ಪ್ರಸಾದ್ ಅವರಿಗೆ, ಮಾಸ್ಟರ್ ಟ್ರೇನರ್‌ಗಳಿಗೆ, ತಜ್ಞ ವೈದ್ಯರು ಹಾಗೂ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಅಂತೆಯೇ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಅಂತಿಮ ವರ್ಷದ ವೈದ್ಯಕೀಯ ವಿದ್ಯಾರ್ಥಿ ಅಭಿನವ್ ಎನ್. ಸೊಪ್ಪಿನ್ ಅವರಿಗೆ ಉಪ ಮುಖ್ಯಮಂತ್ರಿ ಡಾ|| ಸಿ.ಎನ್. ಅಶ್ವತ್ಥನಾರಾಯಣ್ ಅವರು ಅಭಿನಂದನಾ ಪತ್ರವನ್ನು ನೀಡಿ ಸನ್ಮಾನಿಸಿದ್ದಾರೆ.

# ಕೋವಿಡ್‌ನಿಂದ ಯುವಕರೇ ಹೆಚ್ಚು ಸಾವು

## ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಕಾರ್ಯಕ್ರಮದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ ವಿಷಾದ



ಹರಪನಹಳ್ಳಿ, ಮೇ 28- ಕೋವಿಡ್ ಮಹಾಮಾರಿಗೆ ಯುವಕರೆ ಹೆಚ್ಚು ಮರಣ ಹೊಂದುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ತಾಲ್ಲೂಕಿನ ಅರಸಿಕೇರೆ ಗ್ರಾಮದಲ್ಲಿ ಕೋವಿಡ್ ಸೋಂಕು ನಿಯಂತ್ರಣಕ್ಕಾಗಿ ತೆಗೆದುಕೊಂಡ ಕ್ರಮಗಳ ಕುರಿತು ಅವರು ಮಾತನಾಡಿದರು.

ಬಾಳಿ ಬದುಕುವ ಯುವಕರ ಮರಣ ಪ್ರಮಾಣ ಜಾಸ್ತಿಯಾಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯ್ತಿಯವರು, ಆಶಾ ಕಾರ್ಯಕರ್ತರು, ಗ್ರಾಮದ ಮುಖಂಡರು ಬಿಗಿ ಮಾಡಿ ಜನರು ಮನೆ ಬಿಟ್ಟು ಹೊರಗಡೆ ಬರಬಾರದು. ಮನೆಯಲ್ಲೇ ಇದ್ದು, ಜೀವ ರಕ್ಷಣೆ ಮಾಡಿಕೊಳ್ಳುವ ಜೊತೆಗೆ ಸಾಮಾಜಿಕ ಅಂತರ ಹಾಗೂ ಕಡ್ಡಾಯವಾಗಿ ಮಾಸ್ಕ್ ಹಾಕಿಕೊಳ್ಳಬೇಕು ಎಂದು ಜನರಿಗೆ ತಿಳಿ ಹೇಳಬೇಕು ಎಂದರು.

ಸರ್ಕಾರ ಕೋವಿಡ್ ಸೆಂಟರ್ ತೆರೆದು ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದೆ. ಆದರೆ ಕೆಲ ಕೋವಿಡ್ ರೋಗಿಗಳು ನಾವು ಕೋವಿಡ್ ಸೆಂಟರ್‌ಗೆ ಬರುವುದಿಲ್ಲ. ಮನೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತೇವೆ ಎನ್ನುವ ಭಾವನೆ ಇಟ್ಟುಕೊಳ್ಳದೆ, ಕೋವಿಡ್ ಸೆಂಟರ್‌ಗೆ ಹೋಗಿ ಉತ್ತಮ ಚಿಕಿತ್ಸೆ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಶಾಸಕ ಎಸ್.ವಿ. ರಾಮಚಂದ್ರಪ್ಪ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲ್ಲೂಕಿನ ಮಾದಿಹಳ್ಳಿ ಹಾಗೂ ರಾಮಘಟ್ಟ ಗ್ರಾಮಗಳಲ್ಲಿ ಆಸ್ಪತ್ರೆ ಕಟ್ಟುವುದಕ್ಕೆ 90 ಲಕ್ಷ ರೂ, ಕಲ್ಯಾಣ ಕರ್ನಾಟಕದ ಅನುದಾನದಲ್ಲಿ 1.30 ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಏಳು ಗ್ರಾಮ ಪಂಚಾಯ್ತಿಗಳ ಅಭಿವೃದ್ದಿಗೆ ಜನರು ಈ ಹಣವನ್ನು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ರೈತರಿಗೆ ಗೊಬ್ಬರ, ಬೀಜ, ಔಷಧಿ ಕೊರತೆಯಾಗದಂತೆ ಜನರು ದೂರದ ಬಳ್ಳಾರಿಗೆ ಹೋಗದೆ, ಇಲ್ಲೇ ಹತ್ತಿರದಲ್ಲಿರುವ ದಾವಣಗೆರೆಯಲ್ಲಿ ತರಲು ಸಂಸದ ಜಿ.ಎಂ. ಸಿದ್ದೇಶ್ವರ ಅವರ ಜೊತೆಗೆ ಮಾತನಾಡಿದ್ದೇನೆ. ರೈತರಿಗೆ ಯಾವುದೇ ತೊಂದರೆ ಯಾಗದಂತೆ ಗೊಬ್ಬರ, ಬೀಜ, ಔಷಧಿಗಳನ್ನು ಸಮರ್ಪಕವಾಗಿ ವಿತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ತಹಶೀಲ್ದಾರ್ ಎಲ್.ಎಂ. ನಂದೀಶ್, ಉಪತಹಶೀಲ್ದಾರ್ ಫಾತೀಮಾ, ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಅಕ್ಕಮ್ಮ ಲಕ್ಷ್ಮಣ, ಮುಖಂಡರಾದ ಎ. ವಿಶ್ವನಾಥ, ಕೆ. ಆನಂದಪ್ಪ, ಮಂಜಯ್ಯ, ಮರಿಯಪ್ಪ, ಕೆ.ಡಿ. ಅಂಜಿನಪ್ಪ, ಫಣಿಯಾಪುರ ನಿಂಗರಾಜ, ಬಾಲೇನಹಳ್ಳಿ ಕೆಂಚನಗೌಡ, ಗೋಪಿನಾಯ್ಕ, ಪಿಡಿಓ ಅಂಜಿನಪ್ಪ ಇನ್ನಿತರರಿದ್ದರು.

# ದೃಢಪಟ್ಟವರ ಮನೆ ಸೀಲ್ ಡೌನ್‌ಗೆ ಸಲಹೆ

## ಸೋಂಕಿತರ ಮನೆಗೆ ದೊಡ್ಡದಾಗಿ ಸ್ಟಿಕ್ಕರ್ ಅಂಟಿಸುವ ಕೆಲಸವಾಗಲಿ : ಉಮಾಶಂಕರ್



**(1ನೇ ಪುಟದಿಂದ)** ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

ಯಾರೂ ಕೂಡ ಕೋವಿಡ್ ಸೋಂಕಿನ ಕುರಿತು ವೈಯಕ್ತಿಕ ನಿರ್ಧಾರ ಕೈಗೊಳ್ಳುವುದು ಬೇಡ. ಸೋಂಕಿತರು, ಅವರ ಸಂಪರ್ಕಿತರು, ಎಸ್‌ಎಆರ್‌ಐ ಮತ್ತು ಐಎಲ್‌ಐ ಲಕ್ಷಣ ಇರುವವರಿಗೆ ಕಡ್ಡಾಯ ಕೋವಿಡ್ ಪರೀಕ್ಷೆ ಮಾಡಿಸಿ ಪಾಸಿಟಿವ್ ಬಂದವರನ್ನು ಕಡ್ಡಾಯವಾಗಿ ಆಸ್ಪತ್ರೆ ಅಥವಾ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಇರಿಸಿ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು.

ಮದುವೆಗಳು ಸೋಂಕು ಹರಡುವಿಕೆಗೆ ಕಾರಣ ವಾಗಿವೆ. ಈಗಾಗಲೇ ನಿಗದಿಯಾದ, ನಡೆಯುತ್ತಿರುವ ಮದುವೆಗಳನ್ನು ನಿಲ್ಲಿಸುವುದು ಕಷ್ಟ. ಆದ ಕಾರಣ ಜೂನ್ 5 ರ ನಂತರ 15 ದಿನಗಳ ಕಾಲ ಮದುವೆಗಳನ್ನು ನಿಷೇಧ ಮಾಡಿದಲ್ಲಿ ಸೋಂಕು ನಿಯಂತ್ರಣಕ್ಕೆ ತರಬಹುದೆಂಬ ಬಗ್ಗೆ ತಹಶೀಲ್ದಾರರಿಂದ ಸಲಹೆ ಪಡೆದ ಅವರು ಜಿಲ್ಲಾಧಿಕಾರಿಗಳು ಈ ಬಗ್ಗೆ ಚಿಂತನೆ ನಡೆಸುವಂತೆ ಸೂಚಿಸಿದರು.

ಕೋವಿಡ್ ಲಸಿಕೆ ಗೇಮ್ ಚೇಂಜರ್ ಆಗುವುದರಲ್ಲಿ ಅನುಮಾನವಿಲ್ಲ. ಹೆಚ್ಚೆಚ್ಚು ಲಸಿಕಾಕರಣವಾದಷ್ಟು ಜನರು ಕೊರೊನಾ ಮುಕ್ತರಾಗಲು ಸಾಧ್ಯವಿದೆ. ಆದ ಕಾರಣ ಟಾರ್ಗೆಟೆಡ್ ಸಮುದಾಯಗಳಾದ ಆರೋಗ್ಯ, ಫ್ರಂಟ್‌ಲೈನ್ ವರ್ಕರ್ಸ್ ಹಾಗೂ ಇ-ಕಾಮರ್ಸ್ ಡೆಲಿವರಿ ಬಾಯ್ಸ್, ಆಟೋ ಮತ್ತು ಟ್ಯಾಕ್ಸಿ ಡ್ರೈವರ್‌ಗಳು ಈ ರೀತಿ ಸೇವಾನಿರತರಿಗೆ ಮೊದಲ ಆದ್ಯತೆಯಲ್ಲಿ ಲಸಿಕೆ ನೀಡಲು ಯೋಜನೆ ಹಾಕಿಕೊಳ್ಳುವಂತೆ ಹೇಳಿದರು.

ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಜಿಲ್ಲಾ ತಂಡ ಉತ್ತಮವಾಗಿ ತಯಾರಿ ಮಾಡಿಕೊಂಡಿದೆ. ಅದೇ ರೀತಿಯಲ್ಲಿ ತಾಲ್ಲೂಕು ತಂಡಗಳು ಸಹ ತಯಾರಿ ಮಾಡಿಕೊಂಡು ಕೈಜೋಡಿಸಿದಲ್ಲಿ ಜಿಲ್ಲೆ ಕೊರೊನಾ ಮುಕ್ತವಾಗಿ, ಮಾದರಿ ಜಿಲ್ಲೆಯಾಗಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಜಿ.ಪಂ. ಸಿಇಓ ಡಾ.ವಿಜಯ ಮಹಾಂತೇಶ ಬಿ.ದಾನಮ್ಮನವರ್, ಎಡಿಸಿ ಪೂಜಾರ ವೀರಮಲ್ಲಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ಎಸ್‌ಎಲ್‌ಓ ರೇಷ್ಮಾ ಹಾನಗಲ್ ಡಿಹೆಚ್‌ಓ ಡಾ.ನಾಗರಾಜ್, ಡಿಎಸ್ ಡಾ.ಜಯಪ್ರಕಾಶ್, ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಲಾಕ್‌ಡೌನ್‌ನಿಂದ ಸವಿತಾ ಸಮಾಜ ಸಂಕಷ್ಟದಲ್ಲಿ : ಎನ್. ರಂಗಸ್ವಾಮಿ



ದಾವಣಗೆರೆ, ಮೇ 28- ಕೋವಿಡ್ -19 ಕಾಯಿಲೆ ನಿಯಂತ್ರಣಕ್ಕಾಗಿ ಸರ್ಕಾರ ಲಾಕ್‌ಡೌನ್ ಜಾರಿಗೊಳಿಸಿದೆ. ಇದರಿಂದ ಕುಲ ವೃತ್ತಿಯನ್ನೇ ನಂಬಿಕೊಂಡಿದ್ದ ಜಿಲ್ಲೆಯ ಸವಿತಾ ಸಮಾಜ ಸಂಕಷ್ಟದಲ್ಲಿದೆ ಎಂದು ಸಮಾಜದ ಅಧ್ಯಕ್ಷರೂ ಆಗಿರುವ ನ್ಯಾಯವಾದಿ ಎನ್. ರಂಗಸ್ವಾಮಿ ತಿಳಿಸಿದ್ದಾರೆ.

ಇದೀಗ ಕೋವಿಡ್ -19 ಲಾಕ್‌ಡೌನ್‌ನಿಂದ ಸಮುದಾಯದ ಬಂಧುಗಳು ದುಡಿಮೆ ಕಳೆದುಕೊಂಡಿದ್ದಾರೆ. ಈ ಅವಧಿಯಲ್ಲಿ ನಿತ್ಯ ಜೀವನ ನಿರ್ವಹಣೆ, ಹಿರಿಯ ನಾಗರಿಕರ ವೈದ್ಯಕೀಯ ವೆಚ್ಚ ಭರಿಸಲು ಕಷ್ಟವಾಗಿದೆ ಎಂದಿದ್ದಾರೆ.

ಕಳೆದ ಬಾರಿ ಸರ್ಕಾರ 5000 ರೂ. ಘೋಷಣೆ ಮಾಡಿದ್ದರೂ ಸಹ ಸಮುದಾಯದ ಬಹಳಷ್ಟು ಬಂಧುಗಳಿಗೆ ಹಣಕಾಸಿನ ನೆರವು ಸಿಗಲಿಲ್ಲ. ಆದರೆ, ಈ ಬಾರಿ ಸರ್ಕಾರ 2000 ರೂ. ಘೋಷಣೆ ಮಾಡಿದೆ.

ಕಳೆದ ಬಾರಿ ಸರ್ಕಾರ ಕೇಳಿದ ಎಲ್ಲಾ ಫಲಾನುಭವಿಗಳ ದಾಖಲಾತಿಗಳು ಕಾರ್ಮಿಕ ಇಲಾಖೆಯಲ್ಲಿವೆ. ಆದ್ದರಿಂದ ಈ ಹಿಂದೆ ದಾಖಲಾತಿಗಳನ್ನು ನೀಡಿ ಹಣ ಪಡೆದ ಫಲಾನುಭವಿಗಳಿಗೆ ನೇರವಾಗಿ ಅವರ ಖಾತೆಗೆ ಹಾಕು ವಂತೆ ಮಾಡಬೇಕು ಮತ್ತು ಕಳೆದ ಬಾರಿ ಪಡೆಯದಿದ್ದ ಫಲಾನುಭವಿಗಳನ್ನು ಗುರುತಿಸಿ, ಕಡಿಮೆ ದಾಖಲೆ ಪತ್ರಗಳನ್ನು ತೆಗೆದುಕೊಳ್ಳಲು ಆದೇಶಿಸಬೇಕೆಂದು ಸರ್ಕಾರಕ್ಕೆ ಅವರು ಮನವಿ ಮಾಡಿದ್ದಾರೆ.

## 27ನೇ ವಾರ್ಡ್‌ನ ನಾಗರಿಕರಿಗೆ ಲಸಿಕೆ



ದಾವಣಗೆರೆ, ಮೇ 28- ವಾರ್ಡ್ ನಂ 27, ಕೆಟಿಜೆ ನಗರ 10ನೇ ಕ್ರಾಸ್‌ನ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಪಾಲಿಕೆ ಸದಸ್ಯರಾದ ಯಶೋಧ ಹೆಗ್ಗಪ್ಪ ಮುಖಂಡತ್ವದಲ್ಲಿ ಇಲ್ಲಿನ ನಾಗರಿಕರಿಗೆ ಕೋವಿಶಿಲ್ಡ್ ಲಸಿಕೆಯನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಹೆಗ್ಗಪ್ಪ, ಸೋಮಲಾಪುರದ ಹನುಮಂತಪ್ಪ, ಆನಂದ್ ಬಿ.ಜಲಿಯಾಲ್, ನಿಂಗರಾಜ್, ಕುಷ್ಟಗಿ ರಮೇಶ್, ಶ್ರೀನಿವಾಸ್, ಆಶಾ ಕಾರ್ಯಕರ್ತರು, ನರ್ಸ್‌ಗಳು ಹಾಗೂ ಪಾಲಿಕೆ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮಾತ್ರೆಗೆ ಜಿಎಸ್‌ಟಿ ವಿನಾಯಿತಿ

**(1ನೇ ಪುಟದಿಂದ)** ಸಾಲ ಪಡೆದು ರಾಜ್ಯಗಳಿಗೆ ನೀಡಲಿದೆ ಎಂದು ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಸೀತಾರಾಮನ್ ಮಂಡಳಿಯ ಅಧ್ಯಕ್ಷೆಯೂ ಆಗಿದ್ದಾರೆ.

ಕಳೆದ ವರ್ಷದಂತೆ ಈ ವರ್ಷವೂ ಪರಿಹಾರ ಸೆಸ್ ನೀಡಲಾಗುವುದು. ಕಳೆದ ವರ್ಷದ ಪರಿಹಾರ ಸೂತ್ರವನ್ನೇ ಅನುಸರಿಸಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

ಜಿ.ಎಸ್.ಟಿ. ಜಾರಿಯಾದ ಐದು ವರ್ಷಗಳ ಕಾಲ ರಾಜ್ಯಗಳ ಆದಾಯ ಕೊರತೆಯಾದರೆ ಅದನ್ನು ನೀಗಿಸಲು ನಿಯಮ ರೂಪಿಸಲಾಗಿತ್ತು. ಇದನ್ನು 2022ರ ನಂತರದ ಕಾಲಕ್ಕೂ ವಿಸ್ತರಿಸಲು ಮಂಡಳಿಯ ವಿಶೇಷ ಸಭೆ ಕರೆಯಲೂ ನಿರ್ಧರಿಸಲಾಗಿದೆ.

ಸಣ್ಣ ಜಿ.ಎಸ್.ಟಿ. ತೆರಿಗೆ ಪಾವತಿದಾರರು ತಡವಾಗಿ ರಿಟರ್ನ್ ಸಲ್ಲಿಸಿದರೆ, ಅವರಿಗೆ ಕ್ಷಮೆ ನೀಡುವ ಯೋಜನೆಯನ್ನೂ ಜಾರಿಗೆ ತರಲಾಗಿದೆ. ಆದರೆ, ಕೊರೊನಾ ಲಸಿಕೆ ಹಾಗೂ ಔಷಧೀಯ ಉಪಕರಣಗಳಿಗೆ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಮಂಡಳಿ ಸಭೆಯಲ್ಲಿ ಒಮ್ಮತ ಸಾಧ್ಯವಾಗಿಲ್ಲ. ಕಾಂಗ್ರೆಸ್ ಹಾಗೂ ಇತರೆ ಪ್ರತಿಪಕ್ಷಗಳ ಆಡಳಿತದ ರಾಜ್ಯಗಳು ತೆರಿಗೆ ಇಳಿಕೆಗೆ ಬಯಸಿದ್ದವು. ಆದರೆ, ಈ ಇಳಿಕೆಯಿಂದ ಜನರ ಬದಲು ಮಧ್ಯವರ್ತಿಗಳಿಗೆ ಲಾಭವಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

## ಹುಲಿಗಿನಹೊಳೆ: ಸಿಡಿಲಿಗೆ ಬಲಿಯಾದ ರೈತ ಕುಟುಂಬಕ್ಕೆ 5 ಲಕ್ಷ ರೂ. ನೆರವು



ಮಲೇಬೆನ್ನೂರು, ಮೇ 28- ಹುಲಿಗಿನ ಹೊಳೆ ಗ್ರಾಮದಲ್ಲಿ ಮೊನ್ನೆ ಸಿಡಿಲಿಗೆ ಬಲಿಯಾದ ರೈತ ಕೆ. ನಾಗರಾಜ್ ಅವರ ಕುಟುಂಬದವರಿಗೆ ರಾಷ್ಟ್ರೀಯ ನಿರ್ವಹಣಾ ನಿಧಿಯಿಂದ 4 ಲಕ್ಷ ರೂ. ಹಾಗೂ ರಾಜ್ಯ ವಿಪತ್ತು ನಿಧಿಯಿಂದ 1 ಲಕ್ಷ ರೂ., ಒಟ್ಟು 5 ಲಕ್ಷ ರೂ.ಗಳ ಚೆಕ್ಕನ್ನು ಶಾಸಕ ಎಸ್. ರಾಮಪ್ಪ ಅವರು ನೀಡಿದರು. ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಸ್ಮಶಾನಕ್ಕೆ ಹೋಗುವ ದಾರಿಗೆ ಕೆಲವರು ಅಡ್ಡಿಪಡಿಸುತ್ತಿದ್ದಾರೆ ಎಂದು ದೂರಿದಾಗ, ಶಾಸಕ ರಾಮಪ್ಪ ಅವರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿ ಕೂಡಲೇ ರಸ್ತೆ ತೆರವುಗೊಳಿಸುವಂತೆ ಜೊತೆಯಲ್ಲಿದ್ದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರಿಗೆ ಸೂಚಿಸಿದ್ದರು.

ಎಳೆಹೊಳೆ ಗ್ರಾ.ಪಂ. ಅಧ್ಯಕ್ಷ ಎ. ವೀರೇಂದ್ರ, ಪಿಡಿಒ ಅರವಿಂದ್, ಗ್ರಾಮ ಲೆಕ್ಕಾಧಿಕಾರಿ ಬಸವರಾಜು, ಗ್ರಾಮದ ಮುಖಂಡ ನಾಗನಗೌಡ ಇನ್ನಿತರರು ಹಾಜರಿದ್ದರು.

## ಹರಿಹರ ತಾ.ನಲ್ಲಿ 109 ಪಾಸಿಟಿವ್

ಮಲೇಬೆನ್ನೂರು, ಮೇ 28- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶುಕ್ರವಾರ 28 ಜನರಿಗೆ ಕೋವಿಡ್ ಟೆಸ್ಟ್ ಮಾಡಿದ್ದು, 6 ಜನರಿಗೆ ಪಾಸಿಟಿವ್ ಬಂದಿದೆ. ಹಾಲಿವಾಣ ಗ್ರಾಮದ 55 ವರ್ಷದ ಮಹಿಳೆ ಗುರುವಾರ ಹರಿಹರ ಆಸ್ಪತ್ರೆಯಲ್ಲಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಶುಕ್ರವಾರ ಬೆಳಗಿನ ವರದಿ ಪ್ರಕಾರ 109 ಜನರ ಕೋವಿಡ್ ಟೆಸ್ಟ್ ರಿಪೋರ್ಟ್ ಪಾಸಿಟಿವ್ ಬಂದಿದೆ. ಮಲೇಬೆನ್ನೂರಿನಲ್ಲಿ 90 ಮತ್ತು ಹಾಲಿವಾಣದಲ್ಲಿ ಜನರಿಗೆ ಮೊದಲ ಡೋಸ್ ಲಸಿಕೆ ಹಾಕಲಾಗಿದೆ ಎಂದು ವೈದ್ಯ ಡಾ. ನಿಸ್ಸಾರ್ ತಿಳಿಸಿದ್ದಾರೆ.

**ನೇಮಕ :** ದೇವರಬೆಳಕೆರೆ ಗ್ರಾಮದ ಮೊರಾರ್ಜಿ ಶಾಲೆಯಲ್ಲಿ ತೆರೆಯಲು ನಿರ್ಧರಿಸಿರುವ ಕೋವಿಡ್ ಕೇರ್ ಸೆಂಟರ್‌ಗೆ ನೋಡಲ್ ಅಧಿಕಾರಿಯನ್ನಾಗಿ ಉಪತಹಶೀಲ್ದಾರ್ ಆರ್. ರವಿ ಅವರನ್ನು ನೇಮಕ ಮಾಡಲಾಗಿದೆ.

## ಪತ್ರಿಕಾ ವಿತರಕರಿಗೆ ವಿಶೇಷ ಪ್ಯಾಕೇಜ್ ಘೋಷಿಸಿ

ದಾವಣಗೆರೆ, ಮೇ 28- ಮಳೆ, ಚಳಿ ಬಿಸಿಲು ಎನ್ನದೇ ದಿನಂಪ್ರತಿ ಪತ್ರಿಕೆ ವಿತರಣೆ ಕಾರ್ಯದಲ್ಲಿ ತೊಡಗಿರುವ ಪತ್ರಿಕಾ ವಿತರಕರಿಗೆ ಲಾಕ್‌ಡೌನ್ ಅವಧಿಯಲ್ಲಿ ವಿಶೇಷ ಪ್ಯಾಕೇಜ್ ಘೋಷಿಸುವ ಮೂಲಕ ನೆರವನ್ನು ಕಲ್ಪಿಸಬೇಕಾಗಿದೆ.

ಲಾಕ್‌ಡೌನ್‌ನಿಂದಾಗಿ ಪತ್ರಿಕಾ ವಿತರಣೆ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಅನೇಕ ಚಂದಾದಾರರು ಊರುಗಳಿಗಳಿಗೆ ತೆರಳಿದ್ದಾರೆ. ಇನ್ನೂ ಕೆಲವರು ಕೊರೊನಾ ಹೋಗುವವರೆಗೆ ಪತ್ರಿಕೆ ಹಾಕುವುದು ಬೇಡ ಎಂದು ಹೇಳಿದ್ದಾರೆ. ಇದರಿಂದಾಗಿ ವಿತರಕರಿಗೆ ವರಮಾನಕ್ಕೆ ಕೊರತೆಯಾಗಿದೆ.

ಲಾಕ್‌ಡೌನ್ ಮುಗಿಯುವವರೆಗೆ ಪತ್ರಿಕಾ ವಿತರಕರಿಗೆ ವಿಶೇಷ ಪ್ಯಾಕೇಜನ್ನು ಘೋಷಿಸುವ ಮೂಲಕ ನಮ್ಮಗಳ ಜೀವನ ನಿರ್ವಹಣೆಗೆ ಅನುಕೂಲ ಮಾಡಿಕೊಡಬೇಕೆಂದು ರಾಜ್ಯದ ಎಲ್ಲಾ ದಿನಪತ್ರಿಕೆ ವಿತರಕರುಗಳ ಪರವಾಗಿ ನಗರದ ಹಿರಿಯ ಪತ್ರಿಕಾ ವಿತರಕ ಕೃಷ್ಣ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

## ಕೊರೊನಾದಿಂದ ಅನಾಥರಾದ ಮಕ್ಕಳನ್ನು ಗುರುತಿಸಿ ನೆರವಾಗಿ

**(1ನೇ ಪುಟದಿಂದ)** ದಾಖಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಎಲ್. ಎನ್. ರಾವ್ ಹಾಗೂ ಅನಿರುದ್ಧ ಬೋಸ್ ಅವರನ್ನು ಒಳಗೊಂಡ ರಜೆ ಅವಧಿಯ ಪೀಠ ತಿಳಿಸಿದೆ.

ಅನಾಥ ಮಕ್ಕಳನ್ನು ಗುರುತಿಸಿ ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತೆ ಅಮಿಕಸ್ ಕ್ಯೂರಿ ಗೌರವ್ ಅಗರ್‌ವಾಲ್ ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ಆದೇಶ ಹೊರಡಿಸಿದೆ.

ಈ ಮಕ್ಕಳ ಸ್ಥಿತಿಗತಿ ಹಾಗೂ ಅವರಿಗೆ ತಕ್ಷಣದ ಪರಿಹಾರ ನೀಡಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರಗಳು ಮಾಹಿತಿ ನೀಡಬೇಕು ಎಂದು ನ್ಯಾಯಾಲಯ ಹೇಳಿದೆ.

ಬಾಲನ್ಯಾಯ ಕಾಯ್ದೆಯ ಅನ್ವಯ ಇಂತಹ ಮಕ್ಕಳ ಜವಾಬ್ದಾರಿ ಹೊರುವ ಹೊಣೆ ಸರ್ಕಾರಗಳ ಮೇಲಿದೆ ಎಂದು ನ್ಯಾಯಾಲಯ ತಿಳಿಸಿದೆ.

ಜಿಲ್ಲಾಡಳಿತಗಳು ಇಂತಹ ಅನಾಥ ಮಕ್ಕಳ ಮಾಹಿತಿಯನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ವೆಬ್ ತಾಣದಲ್ಲಿ ಶನಿವಾರ ಸಂಜೆಯ ಒಳಗೆ ದಾಖಲಿಸಬೇಕು ಎಂದು ತಿಳಿಸಲಾಗಿದೆ.

## ಪರೀಕ್ಷೆ ತಪ್ಪಿಸಲು ನಕಲಿ ವರದಿ

**(1ನೇ ಪುಟದಿಂದ)** ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಂತರ ಅವರನ್ನು ಅಹಮದ್ ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಪುಣೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಮೇ 26ರಂದು ಸಾವನ್ನಪ್ಪಿದ್ದಾರೆ.

ಮರಣೋತ್ತರ ಪರೀಕ್ಷೆ ನಡೆಸಿದಾಗ ವಿಷ ಸೇವನೆ ಕಂಡು ಬರುತ್ತದೆ ಎಂಬುದನ್ನು ತಿಳಿದಿದ್ದ ಅತ್ತೆ - ಮಾವಂದಿರು, ಸಾವನ್ನು ಮುಚ್ಚಿ ಹಾಕಲು ನಕಲಿ ಕೋವಿಡ್ ಪಾಸಿಟಿವ್ ವರದಿ ಪಡೆದಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಮಹಿಳೆಯ ಕುಟುಂಬದವರು ಕೊರೊನಾದಿಂದ ಸಾವು ಸಂಭವಿಸಿದೆ ಎಂಬುದನ್ನು ಒಪ್ಪಲಿಲ್ಲ. ಆಗ ಇನ್ನೊಂದು ಪರೀಕ್ಷೆ ನಡೆಸಿದಾಗ ನೆಗೆಟಿವ್ ಬಂದಿದೆ.

ಆನಂತರ ಪತಿ ಗಣೇಶ್ ರಾಯಕರ್, ಮಾವ ಶಿವಾಜಿ, ಅತ್ತೆ ವಿಜುಬಾಯಿ ಹಾಗೂ ನಕಲಿ ವರದಿ ಪಡೆಯಲು ನೆರವಾದ ಸಂಬಂಧಿ ನಾಮದೇವ್ ಸುಕ್ಡೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ನಂತರ ಇಬ್ಬರನ್ನು ಬಂಧಿಸಿದ್ದರೆ, ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್ ಸೊತ್ತುಗಳ ಮಾಲೀಕರಾದ ಶ್ರೀಮತಿ ಮಂಜುಳ ಕೋಂ ಎಂ. ರವಿ ವಾಸ : ದಾವಣಗೆರೆ ಇವರಿಂದ ಶ್ರೀ ಎಸ್.ಬಿ. ಹನುಮಂತಪ್ಪ ಬಿನ್ ಬಸಪ್ಪ, ವಾಸ : ಡೋರ್ ನಂ. 116, ಜರಿಕಟ್ಟೆ ಗ್ರಾಮ, ಮುದಹದಡಿ ಪೋಸ್ಟ್, ಜರೀಕಟ್ಟೆ, ದಾವಣಗೆರೆ ತಾಲ್ಲೂಕು ಇವರು ಖರೀದಿಸಲು ಇಚ್ಛಿಸಿದ್ದು, ಸದರಿ ಸೊತ್ತುಗಳ ಖರೀದಿಗಾಗಿ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆ ಇವರಲ್ಲಿ ಸಾಲ ಮಂಜೂರಾತಿಗಾಗಿ ಸದರಿ ಎಸ್.ಬಿ. ಹನುಮಂತಪ್ಪ ಬಿನ್ ಬಸಪ್ಪ ಇವರು ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ, ಸದರಿ ಸೊತ್ತಿನ ಮೇಲೆ ಯಾವುದಾದರೂ ವ್ಯಕ್ತಿಗಳಿಗಾಗಲೀ, ಹಣಕಾಸು ಸಂಸ್ಥೆಗಳಿಗಾಗಲೀ, ಯಾವುದೇ ವಿಧದ ಹಕ್ಕಿದ್ದಲ್ಲಿ, ಹೊಣೆಗಾರಿಕೆಗಳಿದ್ದಲ್ಲಿ, ಪಾಲುದಾರಿಕೆ ಇದ್ದಲ್ಲಿ, ಅಡವಿನ ಅಧಿಕಾರವಿದ್ದಲ್ಲಿ ಅಥವಾ ಯಾವುದೇ ರೂಪದ ತಕರಾರುಗಳಿದ್ದಲ್ಲಿ ಅವರು ತಮ್ಮ ಆಕ್ಷೇಪಣೆಗಳನ್ನು ದೃಢೀಕರಿಸುವ ದಾಖಲೆ ಪತ್ರಗಳೊಂದಿಗೆ ರೆಪ್ಕೋ ಹೋಂ ಫೈನಾನ್ಸ್ ಲಿಮಿಟೆಡ್ ದಾವಣಗೆರೆ ಶಾಖೆಗಾಗಲೀ ಈ ಕೆಳಗೆ ಸಹಿ ಮಾಡಿರುವವರಿಗೆ ಈ ಪ್ರಕಟಣೆ ಪ್ರಕಟವಾದ ಏಳು (7) ದಿನಗಳೊಳಗಾಗಿ ಸಲ್ಲಿಸಬಹುದು.

**ಷೆಡ್ಯೂಲ್ :** 1. ದಾವಣಗೆರೆ ಸಿಟಿ, 5ನೇ ವಾರ್ಡ್, 9 ಎ ಡಿವಿಜನ್, ಶಂಕರ್ ವಿಹಾರ ಬಡಾವಣೆಯ ಸೈಟ್ ನಂ. 141, ಮಹಾನಗರ ಪಾಲಿಕೆ ಡೋರ್ ನಂ. 868/1 ಅಳತೆ 11 1/2x20 ಅಡಿ (230 ಚದುರಡಿ) ಜಾಗದಲ್ಲಿ ಕಟ್ಟಿರುವ ಆರ್‌ಸಿಸಿ ಮೇಲ್ಛಾವಣಿಯುಳ್ಳ ವಾಸದ ಮನೆ, ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ಸೈಟ್ ನಂ. 176, ಪಶ್ಚಿಮಕ್ಕೆ : 7ನೇ ಮುಖ್ಯರಸ್ತೆ, ಉತ್ತರಕ್ಕೆ : ಸೈಟ್ ನಂ. 142, ದಕ್ಷಿಣಕ್ಕೆ : ರಸ್ತೆ.

**2.** ದಾವಣಗೆರೆ ಸಿಟಿ, 5ನೇ ವಾರ್ಡ್, 9 ಎ ಡಿವಿಜನ್, ಶಂಕರ್ ವಿಹಾರ್ ಬಡಾವಣೆಯ ಸೈಟ್ ನಂ. 142, ಮಹಾನಗರ ಪಾಲಿಕೆ ಡೋರ್ ನಂ. 868/1, ಅಳತೆ 20x30 ಅಡಿ (600 ಚದುರಡಿ) ಉಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂ. 175, ಪಶ್ಚಿಮಕ್ಕೆ : 7ನೇ ಮುಖ್ಯರಸ್ತೆ, ಉತ್ತರಕ್ಕೆ : ಸೈಟ್ ನಂ. 143, ದಕ್ಷಿಣಕ್ಕೆ : ಸೈಟ್ ನಂ. 141.

**ಸಹಿ/- ಶಾಮನೂರು ಪ್ರಕಾಶ್, ವಕೀಲರು,**
**2159/2, 4ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್,**
**ದಾವಣಗೆರೆ. ಮೊ. : 94495 12232**

**ದಾವಣಗೆರೆ.**
**ದಿನಾಂಕ : 28.05.2021**


## ಐನಳ್ಳಿ ವಿಶ್ವನಾಥ್ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಶೋಕ

ದಾವಣಗೆರೆ, ಮೇ 28- ನಗರದ ಗಣ್ಯ ವರ್ತಕರಾಗಿದ್ದ ಐನಳ್ಳಿ ವಿಶ್ವನಾಥ್ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಸಂತಾಪ ವ್ಯಕ್ತಪಡಿಸಿದ್ದಾರೆ.


# ಪ್ಯಾಕೇಜ್ ಘೋಷಿಸದೆ ನಿರ್ಲಕ್ಷ್ಯ: ಲಾರಿ ಮಾಲೀಕರ ಬೇಸರ

ದಾವಣಗೆರೆ, ಮೇ 28- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಲಾರಿ ಮಾಲೀಕರಿಗೆ ಯಾವುದೇ ಪ್ಯಾಕೇಜ್ ಘೋಷಿಸದೆ ನಿರ್ಲಕ್ಷ್ಯ ವಹಿಸಿರುವುದು ದುರಂತ ಎಂದು ಜಿಲ್ಲಾ ಲಾರಿ ಮಾಲೀಕರು ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಜೀವನ ಸಾಗಿಸುವುದೇ ಕಷ್ಟವಾಗಿದ್ದು, ಸಾಲ ಪಾವತಿಸಲು ಕಷ್ಟವಾಗುತ್ತಿದೆ. ಕಳೆದ ವರ್ಷ 2020ರಲ್ಲಿ ಡೀಸೆಲ್ ಬೆಲೆ ಪ್ರತಿ ಲೀಟರ್ ಗೆ 68 ರೂ.ಗಳಿತ್ತು. ಈ ವರ್ಷ ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ ತಲಾ 90 ರೂ.ಗಳಾಗಿದೆ. ವಾಹನಗಳ ಬಿಡಿ ಭಾಗಗಳು ಮತ್ತು ಟೈರ್‌ಗಳ ಬೆಲೆ ಕಳೆದ ವರ್ಷಕ್ಕಿಂತ ಶೇ. 15ರಿಂದ 20 ರಷ್ಟು ಅಧಿಕವಾಗಿದೆ. ಜೊತೆಗೆ ಟೋಲ್, ಟ್ಯಾಕ್ಸ್ ತ್ರೈಮಾಸಿಕ ರಸ್ತೆ ತೆರಿಗೆ, ಪರ್ಮಿಟ್ ಇನ್ನು ಹಲವಾರು ತರಹದ ಖರ್ಚುಗಳನ್ನು ಮಾಡಿಕೊಂಡು ವಾಹನಗಳನ್ನು ನಡೆಸುವುದು ದುಸ್ತರವಾಗಿದೆ ಎಂದು ಅಳಲಿಟ್ಟರು.

ಕೇಂದ್ರದ ಹಣಕಾಸು ಸಚಿವರು ಇದನ್ನು ಪರಿಗಣಿಸಿ ಎನ್‌ಬಿಎಫ್‌ಸಿ ಕಂಪನಿಗಳಿಗೆ ಸೂಕ್ತ ನಿರ್ದೇಶನ ನೀಡಿ ಕನಿಷ್ಠ ಪಕ್ಷ ಒಂದು ವರ್ಷಕ್ಕೆ ಬಡ್ಡಿ ರಹಿತ ಸಾಲ ತೆಗೆದುಕೊಳ್ಳಲು ಸೂಚಿಸಬೇಕು. ಸಾಲ ಮರುಪಾವತಿ ಮಾಡಲು ಲಾರಿ ಮಾಲೀಕರಿಗೆ ಮಾನಸಿಕ ಹಿಂಸೆಯನ್ನು ನೀಡದಂತೆ ತಡೆಯಬೇಕು. ಸರಕು ಸಾರಿಗೆ ಉದ್ಯಮಕ್ಕೆ ಪ್ಯಾಕೇಜ್ ಘೋಷಿಸಬೇಕು. ಕೇಂದ್ರ ಸರ್ಕಾರ 2020ರ ಫೆಬ್ರವರಿಯಿಂದ ಜೂನ್ 30,2021 ರವರೆಗೆ ಎಫ್‌ಸಿ, ಎಮಿಷನ್ ಹಾಗೂ ಡಿಎಲ್ ಚಾಲ್ತಿಯಲ್ಲಿದೆ ಎಂದು ಸೂಚಿಸಿದೆ. ಅದೇ ರೀತಿ ಒಂದು ವರ್ಷದ ಅವಧಿಗೆ ಒಂದರಿಂದ ಮೂರು ಲಾರಿ ಇರುವವರಿಗೆ ತೆರಿಗೆಯನ್ನು ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಸ್.ಕೆ. ಮಲ್ಲಿಕಾರ್ಜುನ್, ಮಹಾಂತೇಶ್ ಒಣರೊಟ್ಟಿ, ದಾದಾಪೀರ್, ಮುರುಗೇಶ್, ಖಲೀಂ ಇದ್ದರು.



## ಮಾಗಿ, ತೂಗುತ್ತಿದೆ ಹಲಸು....

ಈಗ ಹಲಸು ಮತ್ತು ಮಾವಿನ ಹಣ್ಣುಗಳು ಬಿಡುವ ಸಮಯವಾಗಿದ್ದು, ಮಲೇಬೆನ್ನೂರು ಸಮೀಪದ ನಿಟ್ಟೂರು ಗ್ರಾಮದ ರೈತ ಕೆ. ಸಂಜೀವ ಮೂರ್ತಿ ಅವರ ಮನೆಯ ಮುಂಭಾಗದಲ್ಲಿರುವ ಹಲಸಿನ ಮರದ ತುಂಬಾ ಹಲಸಿನ ಹಣ್ಣುಗಳು ಮೈ ದುಂಬಿಕೊಂಡು ಎಲ್ಲರನ್ನೂ ಆಕರ್ಷಿಸುತ್ತಿವೆ.

# ಸೋಂಕಿತರೆಂದರೆ ದೂರ ನಿಲ್ಲುವವರ ಮಧ್ಯೆ ದಾಸೋಹ ಸೇವೆ ಶ್ಲಾಘನೀಯ

### ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ತಂಡದವರಿಗೆ ಎಸ್ಸೆಸ್ ಪ್ರಶಂಸೆ

ದಾವಣಗೆರೆ, ಮೇ 28- ಕೊರೊನಾ ಸೋಂಕಿತರು ಹಾಗೂ ಕೊರೊನಾ ವಾರಿಯರ್ಸ್‌ಗೆ ನಿತ್ಯ ಅನ್ನ ದಾಸೋಹ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿರುವ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ತಂಡದವರ ಕಾರ್ಯ ಶ್ಲಾಘನೀಯ ಎಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮುಕ್ತ ಕಂಠದಿಂದ ಪ್ರಶಂಸಿಸಿದರು.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪಕ್ಕೆ ಇಂದು ಭೇಟಿ ನೀಡಿ, ಕೊರೊನಾ ಸೋಂಕಿತರು ಹಾಗೂ ಕೊರೊನಾ ವಾರಿಯರ್ಸ್‌ಗೆ ಅಡುಗೆ ಸಿದ್ಧಪಡಿಸುತ್ತಿರುವುದನ್ನು ವೀಕ್ಷಿಸಿ, ನಂತರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕೊರೊನಾ ಸೋಂಕಿತರನ್ನು ಕಂಡರೆ ಮಾರುದ್ದ ಹೋಗಿ ದೂರ ನಿಲ್ಲುವ ಜನರೇ ಹೆಚ್ಚಿರುವ ಇಂತಹ ಪರಿಸ್ಥಿತಿಯಲ್ಲಿ ನಿಸ್ವಾರ್ಥ ಮನೋಭಾವನೆಯಿಂದ ಜನಾರೋಗ್ಯಕ್ಕೆ ಟೊಂಕ ಕಟ್ಟಿ ನಿಂತು ಅನ್ನ ದಾಸೋಹ ಮಾಡುತ್ತಿರುವ ಯುವಕರ ಕಾರ್ಯವನ್ನು ಮೆಚ್ಚಲೇ ಬೇಕು ಎಂದರು. ನಿಮ್ಮ ಈ ಸೇವಾ ಕಾರ್ಯಕ್ಕೆ ನನ್ನಿಂದ ಏನು ಸಹಾಯ ಬೇಕು, ಎಷ್ಟು ಅಕ್ಕಿ ಬೇಕಾದರೂ ಕೊಡುತ್ತೇನೆ. ಸದುಪಯೋಗವಾಗಬೇಕಷ್ಟೇ ಎಂದು ಸಂಘಟಿಕರಿಗೆ ಎಸ್ಸೆಸ್ ಕಿವಿ ಮಾತು ಹೇಳಿದರು.

ಲಾಕ್‌ಡೌನ್ ಮುಗಿಯುವವರೆಗೂ ಸೇವೆ ನಿರಂತರವಾಗಿರಲಿ ಮತ್ತು ಕೊರೊನಾ ಸೋಂಕಿತರಿಗೆ ಗುಣಮಟ್ಟದ (ಉತ್ಕೃಷ್ಟ) ಆಹಾರವನ್ನೇ ಉಣಬಡಿಸಿ ಎಂದು ಅವರು ಸಲಹೆ ನೀಡಿದರು.



ಪ್ರತಿ ಮಂಗಳವಾರ ಮತ್ತು ಶುಕ್ರವಾರ ನಗರ ದೇವತೆ ದುರ್ಗಾಂಬಿಕಾ ದೇವಸ್ಥಾನದಲ್ಲಿ ಅನ್ನ ದಾಸೋಹ ನಡೆಯುತ್ತಿತ್ತು. ಕೋವಿಡ್ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ರದ್ದಾಗಿದೆ. ದಾನ ಧರ್ಮ ಮಾಡುವ ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ನಿಮ್ಮ ಸಮಾಜಮುಖಿ ಕೆಲಸಕ್ಕೆ ನಮ್ಮ ಸಹಕಾರ ಇದೆ ಎಂದು ಎಸ್ಸೆಸ್ ಭರವಸೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತರಳಬಾಳು ಸೇವಾ ಸಮಿತಿ ಗೌರವಾಧ್ಯಕ್ಷ ಶಶಿಧರ್ ಹೆಮ್ಮನಬೇತೂರು, ತರಳಬಾಳು ಜಗದ್ಗುರುಗಳ ಮಾರ್ಗದರ್ಶನದಂತೆ ಸೇವಾ ಕಾರ್ಯ ಆರಂಭವಾಗಿ ಇಂದಿಗೆ 28 ದಿನಗಳಾಗಿದ್ದು, ದಾನಿಗಳ ಸಹಕಾರದೊಂದಿಗೆ ಸುಸೂತ್ರವಾಗಿ ನಡೆಯುತ್ತಿದೆ. ಕೊರೊನಾ ಸೋಂಕಿತರು, ಕೊರೊನಾ ವಾರಿಯರ್ಸ್ ಹಾಗೂ ಪತ್ರಕರ್ತರು ಸೇರಿದಂತೆ ನಿತ್ಯ 1200 ರಿಂದ 1500 ಜನರಿಗೆ ಅನ್ನದಾಸೋಹ ಸೇವೆ ಮಾಡಲಾಗುತ್ತಿದೆ. ಈವರೆಗೆ 1 ಲಕ್ಷ ಚಪಾತಿ, 40 ಸಾವಿರ ಆಹಾರ ಪ್ಯಾಕ್‌ಗಳನ್ನು ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಎಸ್ಸೆಸ್ ಅವರ ಸೂಚನೆಯಂತೆ ಇಂದು 2000 ಹೋಳಿಗೆ ಮಾಡಿಸಿದ್ದಾಗಿ ತಿಳಿಸಿದರು.


**25 ಸಾವಿರ ರೂ. ದೇಣಿಗೆ :** ಜವಳಿ ಉದ್ಯಮಿ ಬಿ.ಸಿ.ಉಮಾಪತಿ ಅವರು, ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ತಂಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಸೇವೆ ನಿರಂತರವಾಗಿರಲಿ ಎಂದು ಹಾರೈಸಿದರು.

ಇದೇ ವೇಳೆ ವೈಯಕ್ತಿಕವಾಗಿ 25 ಸಾವಿರ ರೂ. ದೇಣಿಗೆಯನ್ನು ಸ್ಥಳದಲ್ಲೇ ನೀಡಿದರು. ಪ್ರತಿದಿನ 750 ಕೊರೊನಾ ಸೋಂಕಿತರಿಗೆ ವಿವಿಧ ಬಗೆಯ ತಿಂಡಿ ನೀಡುತ್ತಿರುವುದಾಗಿ ಹೇಳಿದರು.

ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ಎಸ್ಸೆಸ್ ಅವರು ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುತ್ತಲೇ ಬಂದಿದ್ದು, ದಾನ - ಧರ್ಮದಲ್ಲಿ ಅವರದು ಎತ್ತಿದ ಕೈ ಎಂದರು.

ಪಾಲಿಕೆ ಮಹಾಪೌರ ಎಸ್.ಟಿ.ವೀರೇಶ್, ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯದ ಪದಾಧಿಕಾರಿಗಳಾದ ಶ್ರೀನಿವಾಸ್ ಮೆಳ್ಳೇಕಟ್ಟೆ, ಲಿಂಗರಾಜ್ ಅಗಸನಕಟ್ಟೆ, ಪ್ರಭು ಕಾವಲಹಳ್ಳಿ, ಮಾಗನೂರು ಉಮೇಶ್‌ಗೌಡ್ರು, ಧನ್ಯಕುಮಾರ್ ಎಲೇಬೇತೂರು, ಸತೀಶ್ ಸಿರಿಗೆರೆ, ಶಿವಕುಮಾರ್ ಕೊರಟಿಕೆರೆ, ಗಿರೀಶ್ ಗೌಡ್ರು ಕಕ್ಕರಗೊಳ್ಳ, ಹರೀಶ್ ಕೆ.ಎಲ್. ಬಸಾಪುರ ಹಾಗೂ ಮತ್ತಿತರರಿದ್ದರು.

# ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ರಸಮಂಜರಿ



**ಹರಿಹರ**

ಹರಿಹರ, ಮೇ 28- ಸಂಜೆ ಶಾಸಕ ಎಸ್.ರಾಮಪ್ಪ ಅವರ ನೇತೃತ್ವದಲ್ಲಿ, ನಗರದ ಎಸ್‌ಜೆವಿಪಿ ಕೋವಿಡ್ ಕೇರ್ ಸೆಂಟರ್‌ನಲ್ಲಿರುವ ಕೋವಿಡ್ ರೋಗಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು, ಸೀಮಿತ ಸಮಯದ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಿಲಾಗಿತ್ತು.

ಸದರಿ ರಸಮಂಜರಿ ಕಾರ್ಯಕ್ರಮದ ಉದ್ದೇಶವು, ರೋಗಿಗಳ ಆತ್ಮಸ್ಥೈರ್ಯದ ಜೊತೆಗೆ ಅವರಲ್ಲಿರುವ ನಕಾರಾತ್ಮಕ ಭಾವನೆಗಳನ್ನು ದೂರ ಮಾಡುವುದಾಗಿದ್ದು, ರೋಗಿಗಳನ್ನು ಗುಣಪಡಿಸಲು ಸಂಗೀತದಿಂದಲೂ ಸಾಧ್ಯವಿದೆ ಹಾಗೂ ನಮ್ಮ ತಾಲ್ಲೂಕಿನ ಕೋವಿಡ್ ರೋಗಿಗಳಲ್ಲಿ ಹೊಸ ವಿಶ್ವಾಸ, ಆತ್ಮಸ್ಥೈರ್ಯ ಹೆಚ್ಚಿಸುವುದು ನಮ್ಮ ಜವಾಬ್ದಾರಿ ಎಂಬುದನ್ನು ಮನಗಂಡ ಶಾಸಕರು, ರಸಮಂಜರಿ ಕಾರ್ಯಕ್ರಮದಲ್ಲಿ ಚಿಕ್ಕ ಹಾಗೂ ಚಿಕ್ಕದಾಗಿ, ಸೋಂಕಿತರಿಗೆ ನಿಮ್ಮ ಜೊತೆ ನಾವಿದ್ದೇವೆ ಎಂಬುದನ್ನು ತಿಳಿಸಿ ಹೇಳಿದರು.

ಈ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ, ಕೋವಿಡ್ ಕೇರ್ ಸೆಂಟರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳು, ವಿಜಯ್ ಕುಮಾರ್, ಸಂತೋಷ್ ಹಾಗೂ ಶಾಸಕರ ಆಪ್ತ ಸಹಾಯಕ ಸಿ.ಎಂ. ಹನುಮಂತಪ್ಪ ಹಾಜರಿದ್ದರು.

# ಪಾನ್ ಕಾರ್ಡ್ ಅಪ್‌ಡೇಟ್ ನೆಪ ಖಾತೆಯ ಹಣಕ್ಕೆ ಕನ್ನ


ದಾವಣಗೆರೆ, ಮೇ 28- ಪಾನ್ ಕಾರ್ಡ್ ಅಪ್‌ಡೇಟ್ ನೆಪವೊಡ್ಡಿ ಗೃಹಿಣಿಯೋರ್ವರ ಬ್ಯಾಂಕ್ ಖಾತೆಯಲ್ಲಿದ್ದ 89,263 ರೂ. ಹಣವನ್ನು ಆನ್‌ಲೈನ್ ಮುಖೇನ ದೋಚಿ ವಂಚಿಸಿರುವ ಘಟನೆ ನಡೆದಿದೆ.

ನಗರದ ಸರಸ್ವತಿ ನಗರದ ನಂದಾ ನಾಡಿಗೇರ ವಂಚನೆಗೊಳಗಾದ ಗೃಹಿಣಿ. ಸರಸ್ವತಿ ನಗರ ಬಡಾವಣೆಯಲ್ಲಿನ ಎಸ್‌ಬಿಐ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿದ್ದು, ಮೊಬೈಲ್ ಸಂಖ್ಯೆ ಖಾತೆಗೆ ಲಿಂಕ್ ಆಗಿದೆ. ಅಲ್ಲದೇ ಬ್ಯಾಂಕಿನ ಮೊಬೈಲ್ ಬ್ಯಾಂಕಿಂಗ್ ಆ್ಯಪ್ ಸಹ ಇದೆ. ಇದೇ 26ರಂದು ಆ ಮೊಬೈಲ್ ಸಂಖ್ಯೆಗೆ ಖಾತೆಗೆ ಸಂಬಂಧಿಸಿದಂತೆ ಪಾನ್ ಕಾರ್ಡ್ ಅನ್ನು ಅಪ್‌ಡೇಟ್ ಮಾಡುವಂತೆ ಲಿಂಕ್ ಬಂದಿದ್ದು, ಅದನ್ನು ತೆರೆದಾಗ ಅಲ್ಲಿ ತಿಳಿಸಿದಂತೆ ಯೂಸರ್ ನೇಮ್, ಪಾಸ್‌ವರ್ಡ್ ನಮೂದಿಸಲಾಯಿತು. ನಂತರ ಖಾತೆಯಿಂದ ಹಣ ಕಡಿತವಾಗಿರುವ ಬಗ್ಗೆ ಮೊಬೈಲ್ ನಂಬರ್‌ಗೆ ಸಂದೇಶ ಬಂದಿದೆ ಎಂದು ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಗೃಹಿಣಿಯು ದೂರು ನೀಡಿದ್ದಾರೆ.

# ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ, ಅನ್ನ ದಾಸೋಹ

ಚಿತ್ರದುರ್ಗ, ಮೇ 27- ಕೊರೊನಾದಿಂದ ಸಾವಿನ ಸಂಖ್ಯೆ ಹೆಚ್ಚಾಗಿದ್ದು, ರಾಜ್ಯ ಮತ್ತು ಅಂತರರಾಜ್ಯದಲ್ಲಿ ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ಹಾಗೂ ಬದುಕಿನಲ್ಲಿ ಭದ್ರತೆ ಇಲ್ಲದ ಮತ್ತು ಎಲ್ಲರನ್ನೂ ಕಳೆದುಕೊಂಡ ಮಕ್ಕಳಿಗೆ ಮುರುಘಾ ಮಠದಲ್ಲಿ ಉಚಿತ ಶಿಕ್ಷಣ ಮತ್ತು ಅನ್ನ ದಾಸೋಹವನ್ನು ಕಲ್ಪಿಸಲಾಗುವುದು ಎಂದು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ತಿಳಿಸಿದ್ದಾರೆ.

ಬಸವೇಶ್ವರ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಕೊರೊನಾ ಪೀಡಿತರಿಗೆ ತುರ್ತು ಪರಿಸ್ಥಿತಿಯಲ್ಲಿ ಬಳಸಲು ಬೇಕಾದ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಉಚಿತವಾಗಿ ನೀಡಿದ ಇಂಜಿನಿಯರ್ ಕೆ.ವಿ. ನಾಗರಾಜು (ವಿಭಾ ಇಂಕ್ ಎನ್.ಜಿ.ಓ. ಕ್ಯಾಲಿಫೋರ್ನಿಯಾ, ಅಮೇರಿಕ) ಅವರ ಸಹಪಾಠಿ ರಾಜೀವ್ ಶೇಖರ್ ಹಾಗೂ ಶ್ರೀದೇವಿ ಪಲರ್ಚಲ ಮುಖೇನ ಸ್ವೀಕರಿಸಿದ ಸಂದರ್ಭದಲ್ಲಿ ಶ್ರೀಗಳು ಮಾತನಾಡಿದರು.



ವಿಭಾ ಇಂಕ್ ಸಂಸ್ಥೆಯು ಪ್ರಪಂಚದಾದ್ಯಂತ ಇಂತಹ ಅನೇಕ ಜನೋಪಕಾರಿ ಸೇವೆಗಳನ್ನು ಮಾಡುತ್ತಾ ಬಂದಿದ್ದು, ಇಂದು ಆಸ್ಪತ್ರೆಗೆ ಉಚಿತವಾಗಿ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಿರುವುದು ಅನುಕರಣೀಯ.

ಕೊರೊನಾ ಮೊದಲ ಅಲೆ ಬಂದಾಗ ಸುಮಾರು 10 ಸಾವಿರ ಜನರಿಗೆ ಆಹಾರ ಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಗಿತ್ತು. ಹಾಗೆಯೇ ಈಗಲೂ ಸಹ ಶ್ರೀಮಠದಿಂದ ಅಸಹಾಯಕ ಸಮುದಾಯಗಳಿಗೆ ಕಿಟ್ ವಿತರಣೆ ಮುಂದುವರೆಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಎಸ್.ಜೆ.ಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಬಸವೇಶ್ವರ ಆಸ್ಪತ್ರೆಯ ಡೀನ್ ಡಾ. ಪ್ರಶಾಂತ್, ವೈದ್ಯಕೀಯ ಅಧೀಕ್ಷಕ ಡಾ.ಪಾಲಾಕ್ಷಯ್ಯ, ಡಾ.ಶುಭಾ, ಡಾ. ನಾರಾಯಣಮೂರ್ತಿ, ಡಾ. ಸುಧೀಂದ್ರ ಹಾಗೂ ಮತ್ತಿತರರಿದ್ದರು.

# ನ್ಯಾಯಾಧೀಶರು, ವಕೀಲರಿಗೆ ಲಸಿಕೆ



**ಹರಪನಹಳ್ಳಿ**

ಹರಪನಹಳ್ಳಿ, ಮೇ 28- ಪಟ್ಟಣದ ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹಾಗೂ ಕಿರಿಯ ನ್ಯಾಯಾಧೀಶೆ ಬಿ.ಜಿ. ಶೋಭಾ ಹಾಗೂ ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಕೊರೊನಾ ವೈರಸ್ ಹಾಗೂ ಇತರೆ ಸಾಂಕ್ರಾಮಿಕ ರೋಗ ಹರಡದಂತೆ ಲಸಿಕೆ ಹಾಕಿಸಿಕೊಂಡರು.

ಈ ವೇಳೆ ಹಿರಿಯ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರಗೌಡ್ರು, ಉಪಾಧ್ಯಕ್ಷ ಟಿ. ವೆಂಕಟೇಶ್, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್, ವಕೀಲರಾದ ಮತ್ತಿಹಳ್ಳಿ ಅಜ್ಜಣ್ಣ, ಕೆ.ಜಗದಪ್ಪ, ಟಿ.ಎಂ. ರಮೇಶ್, ಎಸ್.ಎಂ. ರುದ್ರಮುನಿಸ್ವಾಮಿ, ಮುತ್ತಿಗಿ ರೇವಣಸಿದ್ದಪ್ಪ, ವಾಮದೇವ, ವಾಸುದೇವನಾಯ್ಕ, ಕೋಡಿಹಳ್ಳಿ ಪ್ರಕಾಶ್, ಸಣ್ಣ ಲಿಂಗನಗೌಡ, ಹೆಚ್. ಹಾಲೇಶ್, ಬಸವರಾಜ್, ಮಂಜುನಾಥ್, ಸೋಮನಾಥ ಪಟೇಲ್, ಸಿರಾಜ್ ಮತ್ತಿತರರು ಹಾಜರಿದ್ದರು.

## ಅಪರ ಸರ್ಕಾರಿ ವಕೀಲರಾಗಿ ಪ್ರಕಾಶ್‌ಗೌಡ



ಹರಪನಹಳ್ಳಿ, ಮೇ 28- ಪಟ್ಟಣದ ಜೆಎಂಎಫ್‌ಸಿ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲರಾಗಿ ಹರಪನಹಳ್ಳಿ ತಾಲ್ಲೂಕು ಇಟ್ಟಿಗುಡಿ ಗ್ರಾಮದ ವಕೀಲರಾದ ವಿ.ಜಿ. ಪ್ರಕಾಶ್‌ಗೌಡ ನೇಮಕಗೊಂಡಿದ್ದಾರೆ.

# ಆಂಧ್ರ : ಆಸ್ಪತ್ರೆಗಳಲ್ಲಿ ಆಕ್ಸಿಜನ್ ಘಟಕ ಕಡ್ಡಾಯ

ಅಮರಾವತಿ, ಮೇ 28 - ಖಾಸಗಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು ಪ್ರೆಶರ್ ಸ್ವಿಂಗ್ ಅಡ್ಸಾರ್ಪ್ಷನ್ (ಪಿಎಸ್ಎ) ತಂತ್ರಜ್ಞಾನದ ಆಕ್ಸಿಜನ್ ಘಟಕ ಹೊಂದುವುದನ್ನು ಆಂಧ್ರ ಪ್ರದೇಶ ಸರ್ಕಾರ ಕಡ್ಡಾಯಗೊಳಿಸಿದೆ. ಬೆಡ್‌ಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಆಕ್ಸಿಜನ್ ಘಟಕ ಅಳವಡಿಸಿಕೊಳ್ಳಬೇಕು. ಇದರ ಜೊತೆಗೆ ಆಕ್ಸಿಜನ್ ಬೆಡ್‌ಗಳ ಸಂಖ್ಯೆಯಷ್ಟೇ ಕಾನ್ಸಂಟ್ರೇಟರ್‌ಗಳು ಹಾಗೂ ಆಕ್ಸಿಜನ್ ಮಾಸ್ಕ್ ಇತ್ಯಾದಿ ಸೌಲಭ್ಯಗಳನ್ನು ಹೊಂದಬೇಕು ಎಂದು ಪ್ರಧಾನ ಕಾರ್ಯದರ್ಶಿ (ಆರೋಗ್ಯ), ಅನಿಲ್ ಕುಮಾರ್ ಸಿಂಘಾಲ್ ತಿಳಿಸಿದ್ದಾರೆ.

# ರಾಜ್ಯದಲ್ಲಿ ಸಕ್ರಿಯ ಸೋಂಕು 4 ಲಕ್ಷಕ್ಕೂ ಕಡಿಮೆ

ಬೆಂಗಳೂರು, ಮೇ 28 – ರಾಜ್ಯದಲ್ಲಿ ಕೊರೊನಾ ತೀವ್ರತೆ ಇಳಿಮುಖವಾಗುತ್ತಿರುವಂತೆಯೇ, ಸಕ್ರಿಯ ಸೋಂಕು ಪ್ರಕರಣಗಳು 4 ಲಕ್ಷಕ್ಕೂ ಕಡಿಮೆಯಾಗಿವೆ. ರಾಜ್ಯದಲ್ಲಿ ಪ್ರಸಕ್ತ 3.72 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

ಶುಕ್ರವಾರದಂದು 22,823 ಹೊಸ ಸೋಂಕಿತರು ಕಂಡು ಬಂದಿದ್ದರೆ, ಇದೇ ದಿನ 52,253 ಜನ ಗುಣಮುಖರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇದೇ ದಿನ 401 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ. ರಾಜ್ಯದ ಒಟ್ಟು ಸೋಂಕಿತರ ಸಂಖ್ಯೆ 25.46 ಲಕ್ಷ ಹಾಗೂ ಸಾವಿನ ಸಂಖ್ಯೆ 27,806 ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು ನಗರ ಒಂದರಲ್ಲೇ 5,736 ಸೋಂಕಿತರು ಕಂಡು ಬಂದಿದ್ದಾರೆ. 31,237 ಜನ ಗುಣಮುಖರಾಗಿ ಬಿಡುಗಡೆಯಾಗಿದ್ದು, 192 ಜನ ಸಾವನ್ನಪ್ಪಿದ್ದಾರೆ. ರಾಜ್ಯದಲ್ಲಿ ಶುಕ್ರವಾರದಂದು ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ಬರುವ ದರ ಶೇ.16.42 ಹಾಗೂ ಸಾವಿನ ದರ ಶೇ.1.75ರಷ್ಟಾಗಿದೆ.

# ಕಲಾವಿದರಿಗೆ ಆರ್ಥಿಕ ನೆರವು

ಬೆಂಗಳೂರು, ಮೇ 28- ಲಾಕ್‌ಡೌನ್ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಕಲಾವಿದರಿಗೆ ತಲಾ 3,000 ರೂ.ಆರ್ಥಿಕ ನೆರವನ್ನು ಮುಖ್ಯಮಂತ್ರಿಗಳು ಘೋಷಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನೆರವು ನೀಡಲಾಗುವುದು.

35 ವರ್ಷ ಮೇಲ್ಪಟ್ಟ, ವೃತ್ತಿನಿರತ ಹಾಗೂ 10 ವರ್ಷ ಕಲಾಸೇವೆ ಮಾಡಿರುವ ಎಲ್ಲಾ ಪ್ರಕಾರದ ಕಲಾವಿದರು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಇಲಾಖೆಯಿಂದ ಮಾಸಾಶನ ಪಡೆಯುತ್ತಿರಬಾರದು ಹಾಗೂ ಸರ್ಕಾರಿ ನೌಕರರಾಗಿರಬಾರದು.

ಕಲಾವಿದರು ತಮ್ಮ ಹೆಸರು, ವಿಳಾಸ, ಕಲಾಪ್ರಕಾರ, ಆಧಾರ್ ಸಂಖ್ಯೆ, ದೂರವಾಣಿ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯ ವಿವರವನ್ನೊಳಗೊಂಡ ಅರ್ಜಿಯನ್ನು ತಮ್ಮ ಜಿಲ್ಲೆಗಳಲ್ಲಿರುವ ಎಲ್ಲಾ ನಾಗರಿಕ ಸೇವಾ ಕೇಂದ್ರಗಳು ಅಥವಾ ಮೊಬೈಲ್ ಮೂಲಕ ಆನ್‌ಲೈನ್‌ನಲ್ಲಿ ಸೇವಾಸಿಂಧು ಪೋರ್ಟಲ್‌ನಲ್ಲಿಯೇ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಆಯಾ ಜಿಲ್ಲೆಗಳ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಲು ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

## ನಿವೃತ್ತ ಹಿಂದಿ ಪಂಡಿತರಾದ ಡಿ. ಕೊಟ್ರೇಶ್ ನಿಧನ



ಚಿತ್ರದುರ್ಗ ಜಿಲ್ಲೆ ಭರಮಸಾಗರ ವಾಸಿ, ಎಸ್‌ಜೆಎಂ ವಿದ್ಯಾಸಂಸ್ಥೆಯಲ್ಲಿ ನಿವೃತ್ತ ಹಿಂದಿ ಪಂಡಿತರೂ, ಪ್ರಾಂಶುಪಾಲರೂ ಆಗಿದ್ದ **ಶ್ರೀ ಡಿ. ಕೊಟ್ರೇಶ್** ಅವರು ದಿನಾಂಕ 28.05.2021ರ ಶುಕ್ರವಾರ ಬೆಳಗಿನ ಜಾವ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು. ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.05.2021ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಭರಮಸಾಗರದಲ್ಲಿ ನೆರವೇರಿಸಲಾಯಿತು.

- ದುಃಖತಪ್ತ ಕುಟುಂಬ ವರ್ಗ - ಮೊ. 94488 73234

# ಸೋಂಕಿತರ ತುರ್ತು ಚಿಕಿತ್ಸೆಗೆ ಕಾಂಗ್ರೆಸ್‌ನಿಂದ ಆಂಬ್ಯುಲೆನ್ಸ್



### ಹೊನ್ನಾಳಿ ಮಾಜಿ ಶಾಸಕ ಡಿ.ಜಿ. ಶಾಂತನಗೌಡ


ಹೊನ್ನಾಳಿ, ಮೇ 28- ತಾಲ್ಲೂಕು ಕಾಂಗ್ರೆಸ್ ಪಕ್ಷದ ವತಿಯಿಂದ ಕೊರೊನಾ ಸಂದರ್ಭದಲ್ಲಿ ಜನರ ಸೇವೆಗಾಗಿ ಒಂದು ಆ್ಯಂಬುಲೆನ್ಸ್‌ನ್ನು ಸಮರ್ಪಿಸುತ್ತಿದ್ದೇವೆ ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ತಿಳಿಸಿದ್ದಾರೆ.

ಅವರು ಇಂದು ಪಟ್ಟಣದ ಹಳೆ ಆಸ್ಪತ್ರೆಯ ಮುಂಭಾಗದಲ್ಲಿ ಆಂಬ್ಯುಲೆನ್ಸ್ ವಾಹನದ ಕೀಲಿಕೈಯನ್ನು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಅವರಿಗೆ ಹಸ್ತಾಂತರಿಸುವ ಮೂಲಕ ಕೋವಿಡ್ ಸೋಂಕಿತರನ್ನು ಗ್ರಾಮಗಳಿಂದ ತುರ್ತಾಗಿ ಕೇರ್ ಸೆಂಟರ್ ಹಾಗೂ ಆಸ್ಪತ್ರೆಗೆ ಕರೆ ತರಲು ಹಾಗೂ ಬಡ ಜನರನ್ನು ತಮ್ಮ ಮನೆಗಳಿಗೆ ತಲುಪಿಸಲು ಈ ವಾಹನವನ್ನು ಆರೋಗ್ಯ ಇಲಾಖೆಗೆ ನೀಡಲಾಗುತ್ತಿದೆ ಎಂದು ಹೇಳಿದರು.

ನಾಳೆ ದಿನಾಂಕ 29 ರ ಶನಿವಾರ ಬೆಳಗ್ಗೆ 11 ಗಂಟೆಗೆ ಅವಳಿ ತಾಲ್ಲೂಕುಗಳ ಸುಮಾರು 250 ಆಶಾ ಕಾರ್ಯಕರ್ತೆಯರಿಗೆ ಮಾಸ್ಕ್ ಮತ್ತು ಸ್ಯಾನಿಟೈಜರ್‌ನೊಂದಿಗೆ ಆರೋಗ್ಯ ಕಿಟ್ ವಿತರಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಬಸನಗೌಡ ಕೊಟೂರ, ತಾ.ಪಂ. ಇ.ಓ. ಗಂಗಾಧರ ಮೂರ್ತಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಚ್.ಬಿ. ಮಂಜಪ್ಪ, ಜಿ.ಪಂ. ಸದಸ್ಯ ವಿಶ್ವನಾಥ್ ಸಾಸ್ವೇಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗದ್ದಿಗೇಶ್, ಎಂ. ರಮೇಶ್, ರಂಜಿತ್, ಮನು ವಾಲಜ್ಜಿ, ಎ.ಜಿ. ಪ್ರಕಾಶ್, ವಿಜೇಂದ್ರಪ್ಪ, ರಾಜೀವ್, ದರ್ಶನ್ ಬಳ್ಳೇಶ್ವರ ಇನ್ನಿತರ ಮುಖಂಡರಿದ್ದರು.

## ಅಶ್ರುತರ್ಪಣ



ಸ್ನೇಹಕ್ಕೆ ಸ್ನೇಹ ಎಂದು ದೊಡ್ಡವರೊಂದಿಗೆ ವಿನಯವಾಗಿ, ನಿಸ್ವಾರ್ಥ ಸ್ನೇಹ, ಪ್ರೀತಿಯೊಂದಿಗೆ ಚಿಕ್ಕವರೊಂದಿಗೆ ನಯವಾಗಿ, ಎಲ್ಲರೊಂದಿಗೆ ನಸುನಗುತ್ತಾ ನಮ್ಮೆಲ್ಲರ ವಿಶ್ವಾಸವನ್ನು ಗೆದ್ದಿದ್ದ **ಬಿ.ಆರ್. ವಿಶ್ವನಾಥ್** ನೀನು ನಮ್ಮೆಲ್ಲರಿಂದ ಭೌತಿಕವಾಗಿ ದೂರವಾಗಿದ್ದು ಮಾತ್ರ ಊಹಿಸಲಾಸಾಧ್ಯ, ದೇವರು ನೀಡಿದ್ದ ಈ ಜೀವನದ ಕಾಲಾವಕಾಶದಲ್ಲಿ ನಮ್ಮೆಲ್ಲರಿಗೆ ಸ್ನೇಹಿತನಾಗಿ ಸಹೋದರನಾಗಿ ಅಗಲಿದ ನಿನಗೆ ನಮ್ಮಗಳ ಅಶ್ರುತರ್ಪಣ.

♦ ಎಂ. ದೊಡ್ಡಪ್ಪ ♦ ಹೆಚ್.ವಿ. ಪ್ರಸನ್ನ ♦ ರವಿಶಂಕರ್
♦ ಸುಭಾಷ್ ♦ ಶೈಲೇಶ್ ♦ ಶ್ರೀಕಾಂತ್ ರೆಡ್ಡಿ
♦ ಬೆಳ್ಳೂಡಿ ವಿಕ್ರಂ ♦ ಐನಹಳ್ಳಿ ಸಂತೋಷ್
♦ ಮಹೇಶ್ ♦ ನೇತ್ರೇಶ್ ♦ ಅಶ್ರಫ್
♦ ಜಿ.ಗೋಪಾಲ್ ♦ ಕೆ.ಎಸ್. ಮಹೇಶ್ ಹತ್ವಾರ್
♦ ರಾಹುಲ್ ♦ ಶೇಖರ್ ♦ ಇಮ್ರಾನ್

## ಟಿ.ಆರ್.ರಾಜಣ್ಣ ನಿಧನ



ದಾವಣಗೆರೆ ತಾ. ಚಿಕ್ಕನಹಳ್ಳಿ ದಿ. ಹಾಲಮ್ಮ ಮತ್ತು ದಿ. ಟಿ. ರಂಗಪ್ಪ ಇವರ ಪುತ್ರರಾದ ಬೆಂಗಳೂರು ವಾಸಿ **ಟಿ.ಆರ್. ರಾಜಣ್ಣ** ಅವರು ದಿನಾಂಕ 25.05.2021ರ ಮಂಗಳವಾರ ಮಧ್ಯಾಹ್ನ 1.40ಕ್ಕೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.05.2021ರ ಬುಧವಾರ ಬೆಂಗಳೂರಿನಲ್ಲಿ ನೆರವೇರಿತು.

ಇಂತಿ ದುಃಖತಪ್ತರು: ಪತ್ನಿ: ಶ್ರೀಮತಿ ಇಂದಿರ ರಾಜಣ್ಣ ಮತ್ತು ಮಕ್ಕಳು ಶ್ರೀಮತಿ ಶಾರದಮ್ಮ ದಿ. ಶಂಭುಲಿಂಗಪ್ಪ ಎಲಿಗಾರ್ ಮತ್ತು ಮಕ್ಕಳು ಹಾಗೂ ಸೊಸೆಯಂದಿರು ಚಿಕ್ಕನಹಳ್ಳಿ ಟಿ.ಆರ್. ಮಲ್ಲಿನಾಥ್, ಸಹೋದರರು ಮತ್ತು ಸಹೋದರಿಯರು ಓ.ಜಿ. ಬಸವನಗೌಡ, ಸಹೋದರರು ಮತ್ತು ಮಕ್ಕಳು, ಮಲೇಬೆನ್ನೂರು ಕೆ.ಎಸ್.ಸಿದ್ದಲಿಂಗಪ್ಪ ಎಲಿಗಾರ್, ಸಹೋದರರು ಮತ್ತು ಮಕ್ಕಳು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte